03 July 2026 Friday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

info.varthaman@gmail.com


9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 215 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

**ಭಾವನಾಂತರಂಗ**

ಆತ್ಮಾಭಿಮಾನಕ್ಕೆ ಪೆಟ್ಟು ಬಿದ್ದ ಸ್ಥಳದಲ್ಲಿ ವ್ಯಕ್ತಿ ಒಂದು ನಿಮಿಷವೂ ನಿಲ್ಲುವುದಿಲ್ಲ!

-ಸ್ನೇಹಾ ಆನಂದ್


ಸತ್ಯ ಸಾಯಿ ಗ್ರಾಮದಲ್ಲಿ ಸುವರ್ಣ ಮಹೋತ್ಸವ ಸಂಭ್ರಮಾಚರಣೆ — ಪುಟ ಸಂ. 2


ಶಿಕ್ಷಣ ಇಲಾಖೆಯಿಂದಲೇ ಮೊಟ್ಟೆ ವಿತರಣೆ ಮಾಡುವಂತೆ ಮನವಿ — ಪುಟ ಸಂ. 3


ಹಳಕಟ್ಟಿ ಕನ್ನಡದ ಸಾಂಸ್ಕೃತಿಕ ಸೇತುವೆ: ನಿತೀಶ್ ಪಾಟೀಲ್ ಹೇಳಿಕೆ — ಪುಟ ಸಂ. 4

# ಕಲ್ಲು ಕ್ವಾರಿಯಲ್ಲಿ ಬಂಡೆ ಕುಸಿತ: 7 ಕಾರ್ಮಿಕರ ದುರಂತ ಸಾವು

## ಬೆಂಗಳೂರು ದಕ್ಷಿಣ ತಾಲೂಕಿನ ಮಾದಾಪಟ್ಟಣ ಸಮೀಪದ ದಾರುಣ ಘಟನೆ

**ರಾಮನಗರ/ಬೆಂಗಳೂರು:** ಬೆಂಗಳೂರು ದಕ್ಷಿಣ ತಾಲೂಕಿನ ಮಾದಾಪಟ್ಟಣ ಸಮೀಪದ ಕಲ್ಲು ಕ್ವಾರಿಯಲ್ಲಿ ಬಂಡೆ ಕುಸಿದು ಏಳು ಕಾರ್ಮಿಕರು ಮೃತಪಟ್ಟಿರುವ ದಾರುಣ ಘಟನೆ ಗುರುವಾರ ಬೆಳಿಗ್ಗೆ ನಡೆದಿದೆ.

ಈ ದುರಂತದಲ್ಲಿ ಹಲವರು ಗಾಯಗೊಂಡಿದ್ದು, ಅವರನ್ನು ಸಮೀಪದ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ.ಕಾವೇರಿ ಕಂಪನಿಗೆ ಸೇರಿದ ಕ್ವಾರಿಯಲ್ಲಿ ಇಂದು ಬೆಳಗ್ಗೆ ಕಾರ್ಮಿಕರು ಕೆಲಸ ನಿರ್ವಹಿಸುತ್ತಿದ್ದ ವೇಳೆ ಈ ಅವಘಡ ಸಂಭವಿಸಿದೆ. ಸುಮಾರು 100 ಅಡಿ ಎತ್ತರದಲ್ಲಿ ಹಿಟಾಚಿ ಯಂತ್ರದ ಮೂಲಕ ಕ್ವಾರಿಯ ಪ್ರದೇಶವನ್ನು ಸ್ವಚ್ಛಗೊಳಿಸುವ ಕೆಲಸ ನಡೆಯುತ್ತಿತ್ತು. ಇದೇ ವೇಳೆ ಕೆಳಭಾಗದಲ್ಲಿ ಕಾರ್ಮಿಕರು ಕೆಲಸ ಮಾಡುತ್ತಿದ್ದರು.

ಪ್ರಾಥಮಿಕ ಮಾಹಿತಿಯ ಪ್ರಕಾರ, ಹಿಟಾಚಿ ಯಂತ್ರದ ಚಾಲಕ ಕೆಳಭಾಗದಲ್ಲಿ ಕಾರ್ಮಿಕರು ಪುಟ 2ಕ್ಕೆ



### ಮೃತಪಟ್ಟವರ ವಿವರ

ರಾಮು (44), ರಾಜ್ ಪಾಲ್ ಸಿಂಗ್ (35), ಸತ್ಯನಾರಾಯಣ ಸಿಂಗ್ (31), ರಾಮ್ ವಾತರ್ ಸಿಂಗ್ (29), ಧರ್ಮೇಶ್ ಸಿಂಗ್ (22), ರಾಜೇಶ್ ಪ್ರಸಾದ್ ಚೌಧರಿ (24), ಭುವನೇಶ್ವರ್ ಸಿಂಗ್ ಗೊಂಡ್ (33).

### ವರದಿ ಬಳಿಕ ಕ್ರಮ: ಡಿಕೆ ಶಿವಕುಮಾರ್

**ಬೆಂಗಳೂರು:** ರಾಮನಗರ ಜಿಲ್ಲೆಯ ಕಲ್ಲು ಕ್ವಾರಿ ದುರಂತದ ಕುರಿತು ಅಧಿಕೃತ ವರದಿ ಬಂದ ಬಳಿಕ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ. ವಿಧಾನಸೌಧದಲ್ಲಿ ಮಾತನಾಡಿದ ಅವರು, ಪೊಲೀಸರು ಹಾಗೂ ಗಣಿ ಮತ್ತು ಭೂವಿಜ್ಞಾನ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಸ್ಫೋಟದಿಂದ ದುರಂತ ಸಂಭವಿಸಿಲ್ಲ ಎಂಬ ಪ್ರಾಥಮಿಕ ಮಾಹಿತಿ ಲಭ್ಯವಾಗಿದ್ದು, ಕ್ವಾರಿ ಕಾನೂನುಬದ್ಧವಾಗಿ ಕಾರ್ಯನಿರ್ವಹಿಸುತ್ತಿದೆಯೇ ಹಾಗೂ ನಿಯಮಗಳನ್ನು ಪಾಲಿಸಲಾಗಿತ್ತೇ ಎಂಬ ಬಗ್ಗೆ ವರದಿ ಪಡೆದ ಬಳಿಕ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದರು.

ಮೃತರ ಕುಟುಂಬಗಳಿಗೆ ಪರಿಹಾರ ನೀಡುವ ಕುರಿತು ಮಾತನಾಡಿದ ಅವರು,

### ಬಮೂಲ್ ನಿರ್ದೇಶಕ ಸತೀಶ್ ಬಿಜೆಪಿಯಿಂದ ಉಚ್ಚಾಟನೆ

**ಬೆಂಗಳೂರು:** ರಾಜ್ಯ ಬಿಜೆಪಿಯಲ್ಲಿ ಉಚ್ಚಾಟನೆ ಪರ್ವ ಮುಂದುವರೆದಿದೆ.

ಇತ್ತೀಚೆಗಷ್ಟೇ ರಾಜ್ಯ ಬಿಜೆಪಿ ವಕ್ತಾರ ಎಂಜಿ ಮಹೇಶ್ ಅವರನ್ನು ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ಆರು ವರ್ಷಗಳ ಕಾಲ ಉಚ್ಚಾಟನೆ ಮಾಡಲಾಗಿತ್ತು. ಇದೀಗ ರಾಜ್ಯ ರೈತ ಮೋರ್ಚಾ ಪ್ರಧಾನ ಕಾರ್ಯದರ್ಶಿ, ಬಮೂಲ್ ನಿರ್ದೇಶಕ ಸತೀಶ್ ಕಡತನಮಲೆ ಅವರನ್ನು ಬಿಜೆಪಿ ಪ್ರಾಥಮಿಕ ಸದಸ್ಯತ್ವದಿಂದ 6 ವರ್ಷಗಳ ಕಾಲ ಉಚ್ಚಾಟನೆ ಮಾಡಲಾಗಿದೆ.

ಪಕ್ಷ ವಿರೋಧಿ ಚಟುವಟಿಕೆ ಆರೋಪದ ಮೇಲೆ ಸತೀಶ್ ಅವರನ್ನು ಪಕ್ಷದಿಂದ ಆರು ವರ್ಷಗಳ ಕಾಲ ಉಚ್ಚಾಟಿಸಿ ಬಿಜೆಪಿ ರಾಜ್ಯ ಶಿಸ್ತು ಸಮಿತಿ ಅಧ್ಯಕ್ಷ ಲಿಂಗರಾಜ ಪಾಟೀಲ್ ಆದೇಶಿಸಿದ್ದಾರೆ.

ಸ್ಥಳೀಯ ಬಿಜೆಪಿ ಮುಖಂಡರು ಸತೀಶ್ ಅವರ ನಡವಳಿಕೆ ಕುರಿತು ರಾಜ್ಯ ಶಿಸ್ತು ಸಮಿತಿಗೆ ದೂರು ನೀಡಿದ್ದರು. ಈ ಹಿನ್ನೆಲೆಯಲ್ಲಿ ಪಕ್ಷವು ಅವರಿಗೆ ನೋಟಿಸ್ ನೀಡಿ ಸ್ಪಷ್ಟೀಕರಣ ಕೇಳಿತ್ತು. ಆದರೆ ಸತೀಶ್ ಕಡತನಮಲೆ ಅವರು ನೀಡಿದ ಸ್ಪಷ್ಟೀಕರಣವು ಸಮಂಜಸ ಹಾಗೂ ತೃಪ್ತಿಕರವಾಗಿಲ್ಲದ ಕಾರಣ, ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಎಲ್ಲಾ ಜವಾಬ್ದಾರಿಗಳಿಂದ ಮುಕ್ತಗೊಳಿಸಿ ಆರು ವರ್ಷಗಳ ಕಾಲ ಪಕ್ಷದಿಂದ ಉಚ್ಚಾಟಿಸಲಾಗಿದೆ ಎಂದು ಆದೇಶದಲ್ಲಿ ಹೇಳಲಾಗಿದೆ.

### ಕ್ವಾರಿ ದುರಂತ: ನಿರ್ಲಕ್ಷ್ಯದ ಪರಮಾವಧಿ: ಸಚಿವ ಖರ್ಗೆ

**ಬೆಂಗಳೂರು:** ಬೆಂಗಳೂರು ದಕ್ಷಿಣ ತಾಲ್ಲೂಕಿನ ಮಡಪಟ್ಟಣದಲ್ಲಿರುವ ಕಲ್ಲುಕ್ವಾರಿಯಲ್ಲಿ ಸಂಭವಿಸಿದ ಕುಸಿತ ದುರಂತದಲ್ಲಿ ಸುಮಾರು ಎಂಟು ಮಂದಿ ಮೃತಪಟ್ಟಿರುವ ಶಂಕೆಯಿದೆ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.


ಗಣಿ ಮತ್ತು ಭೂವಿಜ್ಞಾನ ಇಲಾಖೆ ಹಾಗೂ ಗೃಹ ಇಲಾಖೆಯ ಅಧಿಕಾರಿಗಳು ಸ್ಥಳದಲ್ಲಿದ್ದು ಪರಿಸ್ಥಿತಿಯನ್ನು ಪರಿಶೀಲಿಸುತ್ತಿದ್ದಾರೆ.

ಈ ದುರಂತದಲ್ಲಿ ಎಂಟು ಮಂದಿ ಮೃತಪಟ್ಟಿರುವಂತೆ ತೋರುತ್ತಿದೆ. ಅವರಲ್ಲಿ ಹೆಚ್ಚಿನವರು ಹೊರ ರಾಜ್ಯದವರಾಗಿದ್ದು, ಒಬ್ಬರು ನಮ್ಮ ರಾಜ್ಯದವರು. ವಿವರವಾದ ವರದಿಗಾಗಿ ನಾವು ಕಾಯುತ್ತಿದ್ದೇವೆ.

ಗಣಿ ಮತ್ತು ಭೂವಿಜ್ಞಾನ ಇಲಾಖೆ ಪರಿಸ್ಥಿತಿಯನ್ನು ಮೌಲ್ಯಮಾಪನ ಮಾಡುತ್ತಿದೆ ಎಂದು ಪ್ರಿಯಾಂಕ್ ಖರ್ಗೆ ಹೇಳಿದರು.

### ರಾಷ್ಟ್ರಪತಿ ದ್ರೌಪತಿ ಮುರ್ಮು ಸಂತಾಪ

**ನವದೆಹಲಿ:** ಕರ್ನಾಟಕದ ಬೆಂಗಳೂರಿನ ಮಾಗಡಿ ರಸ್ತೆ ಬಳಿ ಇರುವ ಎರಡು ಕಲ್ಲು ಕ್ವಾರಿಯಲ್ಲಿ ಬಂಡೆ ಕುಸಿದು ಏಳು ಜನ ಮೃತಪಟ್ಟಿದ್ದು, ಜೀವಹಾನಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಗುರುವಾರ ತೀವ್ರ ದುಃಖ ವ್ಯಕ್ತಪಡಿಸಿದ್ದಾರೆ ಮತ್ತು ಮೃತರ ಕುಟುಂಬಗಳಿಗೆ ಸಂತಾಪ ಸೂಚಿಸಿದ್ದಾರೆ.



ಬೆಂಗಳೂರು ದಕ್ಷಿಣ ತಾಲ್ಲೂಕಿನ ಕಲ್ಲು ಕ್ವಾರಿಯಲ್ಲಿ ಗುರುವಾರ ಬೃಹತ್ ಗ್ರಾನೈಟ್ ಬಂಡೆ ಕುಸಿದು ಎಂಟು ಕಾರ್ಮಿಕರು ಮೃತಪಟ್ಟಿದ್ದು, ಅವರಲ್ಲಿ ಹೆಚ್ಚಾಗಿ ಬಿಹಾರದ ಮೂಲದವರಾಗಿದ್ದಾರೆ. ಪುಟ 2ಕ್ಕೆ

### ಶಾಸಕ ಎಸ್.ಟಿ.ಸೋಮಶೇಖರ್ ತೀವ್ರ ಆಕ್ರೋಶ

**ಬೆಂಗಳೂರು/ರಾಮನಗರ:** ಬೆಂಗಳೂರು ದಕ್ಷಿಣ ತಾಲೂಕಿನ ಮಾದಪಟ್ಟಣದ ಬಳಿ ಸಂಭವಿಸಿದ ಭೀಕರ ಕಲ್ಲು ಕ್ವಾರಿ ದುರಂತಕ್ಕೆ ಸಂಬಂಧಿಸಿದಂತೆ ಯಶವಂತಪುರ ಶಾಸಕ ಎಸ್.ಟಿ. ಸೋಮ ಶೇಖರ್ ತೀವ್ರ ಆಕ್ರೋಶ ವ್ಯಕ್ತಪಡಿಸಿ, ಕ್ವಾರಿ ಮಾಲೀಕನನ್ನು ತಕ್ಷಣವೇ ಬಂಧಿಸಿ ಮೃತರ ಕುಟುಂಬಕ್ಕೆ 1 ಕೋಟಿ ಪರಿಹಾರ ನೀಡುವಂತೆ ಆಗ್ರಹಿಸಿದ್ದಾರೆ. ವಿಧಾನಸೌಧದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಲ್ಲು ಕ್ವಾರಿ ಗಳಲ್ಲಿ ಅಕ್ರಮ ಬ್ಲಾಸ್ಟಿಂಗ್ ಬಗ್ಗೆ ತಾವು ಈ ಹಿಂದೆಯೇ ಹಲವು ಬಾರಿ ಸರ್ಕಾರದ ಗಮನ ಸೆಳೆದಿದ್ದಾಗಿ



ಹೇಳಿದರು. ಕಾನೂನುಬದ್ಧವಾಗಿ ಮಾತ್ರ ಸ್ಫೋಟಕ ಬಳಸಿ ಗಣಿಗಾರಿಕೆ ನಡೆಸುವಂತೆ ಕ್ವಾರಿ ಮಾಲೀಕರ ಸಭೆ ಕರೆದು ಎಚ್ಚರಿಕೆ ನೀಡಲಾಗಿತ್ತು. ಗರ್ಭಿಣಿ ಚಿರತೆ ಸಾವನ್ನಪ್ಪಿದ ಸಂದರ್ಭದಲ್ಲಿಯೂ ಇದೇ ವಿಚಾರವನ್ನು ಪ್ರಸ್ತಾಪಿಸಿದ್ದೆ ಎಂದು ನೆನಪಿಸಿದರು.



### ಇಸ್ರೋ, ಜಿಲ್ಲಾ ನ್ಯಾಯಾಲಯಗಳಿಗೆ ಬಾಂಬ್ ಬೆದರಿಕೆ

**ಬೆಂಗಳೂರು:** ಬೆಂಗಳೂರಿನ ಇಸ್ರೋ ಕಚೇರಿ ಸೇರಿದಂತೆ ಚಾಮರಾಜನಗರ, ಚಿಕ್ಕಮಗಳೂರು ಹಾಗೂ ಯಾದಗಿರಿ ಜಿಲ್ಲಾ ನ್ಯಾಯಾಲಯಗಳಿಗೆ ಇ-ಮೇಲ್ ಮೂಲಕ ಬಾಂಬ್ ಬೆದರಿಕೆ ಸಂದೇಶಗಳು ಬಂದಿದ್ದು, ಭದ್ರತಾ ಸಿಬ್ಬಂದಿ ಹಾಗೂ ಪೊಲೀಸರು ತಕ್ಷಣ ಶೋಧ ಕಾರ್ಯ ನಡೆಸಿದ್ದಾರೆ.

ಬೆದರಿಕೆ ಸಂದೇಶ ಬಂದ ಕೂಡಲೇ ಇಸ್ರೋ ಕಚೇರಿಯನ್ನು ಮುನ್ನೆಚ್ಚರಿಕಾ ಕ್ರಮವಾಗಿ ತೆರವುಗೊಳಿಸಿ, ಬಾಂಬ್ ನಿಷ್ಕ್ರಿಯ ದಳ ಹಾಗೂ ಶ್ವಾನದಳದ ಸಹಾಯದಿಂದ ಪರಿಶೀಲನೆ ನಡೆಸಲಾಯಿತು. ಶೋಧ ಕಾರ್ಯದಲ್ಲಿ ಯಾವುದೇ ಅನುಮಾನಾಸ್ಪದ ವಸ್ತು ಪತ್ತೆಯಾಗಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

ಇದೇ ವೇಳೆ ಚಾಮರಾಜನಗರ, ಚಿಕ್ಕಮಗಳೂರು ಹಾಗೂ ಯಾದಗಿರಿ ಜಿಲ್ಲಾ ನ್ಯಾಯಾಲಯಗಳಲ್ಲೂ ಭದ್ರತೆಯನ್ನು ಹೆಚ್ಚಿಸಿ, ತಪಾಸಣೆ ನಡೆಸಲಾಗಿದೆ. ಘಟನೆ ಕುರಿತು ಸೈಬರ್ ಕ್ರೈಂ ಹಾಗೂ ಸ್ಥಳೀಯ ಪೊಲೀಸರು ಇ-ಮೇಲ್ ಮೂಲವನ್ನು ಪತ್ತೆಹಚ್ಚುವ ತನಿಖೆ ಮುಂದುವರಿಸಿದ್ದಾರೆ.

## ಐಎಎಸ್ ಅಧಿಕಾರಿಗಳ ವರ್ಗಾವಣೆ ಹರ್ಷ ಗುಪ್ತಗೆ ಪ್ರಜಾಸೇವಾ ಇಲಾಖೆ

**ಬೆಂಗಳೂರು:** ರಾಜ್ಯ ಸರ್ಕಾರ ಐಎಎಸ್ ಅಧಿಕಾರಿಗಳ ವರ್ಗಾವಣೆ ಮುಂದುವರಿಸಿದ್ದು, ಬುಧವಾರ ಐದು ಹಿರಿಯ ಅಧಿಕಾರಿಗಳನ್ನು ವರ್ಗಾವಣೆ ಮಾಡಿ ಆದೇಶ ಹೊರಡಿಸಿದೆ. ಆಡಳಿತಾತ್ಮಕ ಅಗತ್ಯ ಹಾಗೂ ಅಧಿಕಾರಿಗಳ ಮನವಿಯನ್ನು ಪರಿಗಣಿಸಿ ಈ ವರ್ಗಾವಣೆಗಳನ್ನು ತಕ್ಷಣದಿಂದಲೇ ಜಾರಿಗೆ ಬರುವಂತೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಡಿಪಿಎಆರ್) ಅಧಿಸೂಚನೆ ಪ್ರಕಟಿಸಿದೆ.



ಈ ವರ್ಗಾವಣೆಯಲ್ಲಿ ಹಿರಿಯ ಐಎಎಸ್ ಅಧಿಕಾರಿ ಹರ್ಷ ಗುಪ್ತ ಅವರನ್ನು ನೂತನವಾಗಿ ಸ್ಥಾಪಿಸಲಾದ ಪ್ರಜಾಸೇವಾ ಇಲಾಖೆಯ ಪ್ರಧಾನ ಕಾರ್ಯದರ್ಶಿಯಾಗಿ ನೇಮಿಸಲಾಗಿದೆ. ಜೊತೆಗೆ ಅವರು ಕರ್ನಾಟಕ ಮೇಲ್ಮನವಿ ನ್ಯಾಯಮಂಡಳಿಯ ಅಧ್ಯಕ್ಷ ಹುದ್ದೆಯ ಹೆಚ್ಚುವರಿ ಪ್ರಭಾರವನ್ನೂ ಮುಂದುವರಿಸಲಿದ್ದಾರೆ.

ಹುದ್ದೆ ನಿರೀಕ್ಷೆಯಲ್ಲಿದ್ದ ಐಎಎಸ್ ಅಧಿಕಾರಿ ಆರ್. ರಾಗಪ್ರಿಯ ಅವರನ್ನು ಕಾರ್ಮಿಕ ಇಲಾಖೆಯ ಆಯುಕ್ತರನ್ನಾಗಿ ನೇಮಕ ಮಾಡಲಾಗಿದೆ. ಈವರೆಗೆ ಕಾರ್ಮಿಕ ಇಲಾಖೆಯ ಆಯುಕ್ತರಾಗಿದ್ದ ಡಾ.ಗೋಪಾಲ ಕೃಷ್ಣ ಅವರನ್ನು ಕಾಲೇಜು ಶಿಕ್ಷಣ ಇಲಾಖೆಗೆ ವರ್ಗಾವಣೆ ಮಾಡಲಾಗಿದೆ. ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತೆಯಾಗಿದ್ದ ಎನ್. ಮಂಜುಶ್ರೀ ಅವರಿಗೆ ಸದ್ಯ ಯಾವುದೇ ಹೊಸ ಹುದ್ದೆ ನೀಡಲಾಗಿಲ್ಲ.

### 73 ಖಾಯಂ ಹುದ್ದೆಗಳ ಮರುಹೊಂದಾಣಿಕೆ

ಪ್ರಜಾಸೇವಾ ಇಲಾಖೆಯಲ್ಲಿ ಒಟ್ಟು 73 ಖಾಯಂ ಹುದ್ದೆಗಳನ್ನು ಮರುಹೊಂದಾಣಿಕೆ ಮೂಲಕ ಸೃಷ್ಟಿ ಸಲಾಗಿದೆ. ಸರ್ಕಾರದ ಕಾರ್ಯದರ್ಶಿ, ಮಿಷನ್ ನಿರ್ದೇಶಕ, ಅಪರ ಮಿಷನ್ ನಿರ್ದೇಶಕ, ಉಪ ಕಾರ್ಯದರ್ಶಿ ಹಾಗೂ ಆಡಳಿತಾಧಿಕಾರಿ ಸೇರಿದಂತೆ ವಿವಿಧ ಹುದ್ದೆಗಳು ಇದರಲ್ಲಿ ಸೇರಿವೆ. ಜೊತೆಗೆ ತಾಂತ್ರಿಕ ಹಾಗೂ ಆಡಳಿತಾತ್ಮಕ ಕಾರ್ಯಗಳಿಗಾಗಿ 48 ಹುದ್ದೆಗಳನ್ನು ಗುತ್ತಿಗೆ-ಹೊರ ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಅನುಮೋದನೆ ನೀಡಿದೆ.

## ಬಿಗಿ ಬಂದೋಬಸ್ತಿನಲ್ಲಿ ಅಮರನಾಥ ಯಾತ್ರೆಗೆ ರಾಜ್ಯಪಾಲರ ಹಸಿರು ನಿಶಾನೆ

**ಶ್ರೀನಗರ:** ದೇಶದ ಧಾರ್ಮಿಕ ಯಾತ್ರೆಗಳಲ್ಲಿ ಒಂದಾದ ಅಮರನಾಥ ಯಾತ್ರೆಯು ಶುಕ್ರವಾರದಿಂದ ಅಧಿಕೃತವಾಗಿ ಆರಂಭಗೊಂಡಿದೆ.

ಬಿಗಿ ಭದ್ರತಾ ವ್ಯವಸ್ಥೆಯ ನಡುವೆ ಜಮ್ಮುವಿನ ಭಗವತಿ ನಗರ ಬೇಸ್ ಕ್ಯಾಂಪ್‌ನಿಂದ ಮೊದಲ ತಂಡದ ಭಕ್ತರು ಕಾಶ್ಮೀರದತ್ತ ಪ್ರಯಾಣ ಬೆಳೆಸಿದೆ ಜಮ್ಮು ಮತ್ತು ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ವಿಶೇಷ ಪೂಜೆ ಸಲ್ಲಿಸಿದ ಬಳಿಕ ಮೊದಲ ಬ್ಯಾಚ್‌ಗೆ ಹಸಿರು ನಿಶಾನೆ ತೋರಿದರು.

ಮೊದಲ ತಂಡದಲ್ಲಿ ಒಟ್ಟು 4,822 ಯಾತ್ರಿಕರ ಪೈಕಿ 3,707 ಪುರುಷರು, 816 ಮಹಿಳೆಯರು, 16 ಮಕ್ಕಳು ಹಾಗೂ 283 ಸಾಧು-ಸಾಧ್ವಿಯರು ಸೇರಿದ್ದಾರೆ.

259 ಬಸ್ ಹಾಗೂ ಖಾಸಗಿ ವಾಹನಗಳ ಬೆಂಗಾವಲು ಪಡೆಯೊಂದಿಗೆ ಅಮರನಾಥ ಗುಹೆಯತ್ತ ಪ್ರಯಾಣಿಸುತ್ತಿದ್ದಾರೆ. ಇವರಲ್ಲಿ 2,510 ಮಂದಿ ಸಾಂಪ್ರದಾಯಿಕ ಪಹಲ್ಗಾಮ್ ಮಾರ್ಗ ಆಯ್ಕೆ ಮಾಡಿಕೊಂಡಿದ್ದರೆ, 2,312 ಮಂದಿ ಬಲ್ತಾಲ್ ಮಾರ್ಗಮೂಲಕ ತೆರಳುತ್ತಿದ್ದಾರೆ. ಎರಡೂ ಮಾರ್ಗಗಳಲ್ಲಿ ಭದ್ರತಾ ಪಡೆಗಳು ಕಟ್ಟೆಚ್ಚರ ವಹಿಸಿದ್ದು,



ಜಮ್ಮು-ಶ್ರೀನಗರ ರಾಷ್ಟ್ರೀಯ ಹೆದ್ದಾರಿಯುದ್ದಕ್ಕೂ ವಿಶೇಷ ಭದ್ರತಾ ವ್ಯವಸ್ಥೆ ಕಲ್ಪಿಸಲಾಗಿದೆ.

ಇತ್ತೀಚಿನ ಭದ್ರತಾ ಸವಾಲುಗಳನ್ನು ಗಮನದಲ್ಲಿಟ್ಟುಕೊಂಡು ಪ್ರತಿಯೊಬ್ಬ ನೋಂದಾಯಿತ ಯಾತ್ರಿಕರಿಗೂ ಜಿಪಿಎಸ್ ಆಧಾರಿತ ಆರ್‌ಎಫ್‌ಐಡಿ ಕಾರ್ಡ್ ಪುಟ 2ಕ್ಕೆ

### ಪೊಲೀಸರಿಗೆ ಬಯೋಮೆಟ್ರಿಕ್ ಹಾಜರಾತಿ ಕಡ್ಡಾಯ

**ಬೆಂಗಳೂರು:** ಕರ್ನಾಟಕ ಪೊಲೀಸ್ ಇಲಾಖೆಯ ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಇನ್ನುಮುಂದೆ ಬಯೋಮೆಟ್ರಿಕ್ ಆಧಾರಿತ ಡಿಜಿಟಲ್ ಹಾಜರಾತಿ ಕಡ್ಡಾಯವಾಗಿದೆ. ಈ ಸಂಬಂಧ ಪೊಲೀಸ್ ಪ್ರಧಾನ ಕಚೇರಿ ಜ್ಞಾಪನಾ ಪತ್ರ ಹೊರಡಿಸಿದ್ದು, ನಿಯಮ ಪಾಲಿಸದ ಸಿಬ್ಬಂದಿಯ ವಿರುದ್ಧ ಕ್ರಮ ಕೈಗೊಳ್ಳುವ ಎಚ್ಚರಿಕೆ ನೀಡಲಾಗಿದೆ. ರಾಜ್ಯ ಸರ್ಕಾರದ ಆದೇಶದಂತೆ ಮೇ 1, 2026ರಿಂದ ಎಲ್ಲಾ ಸರ್ಕಾರಿ ಇಲಾಖೆ, ನಿಗಮ ಹಾಗೂ ಮಂಡಳಿಗಳಲ್ಲಿ ಕರ್ನಾಟಕ ಆಧುನಿಕ ಹಾಜರಾತಿ ನಿರ್ವಹಣಾ ವ್ಯವಸ್ಥೆ ಜಾರಿಯಲ್ಲಿದೆ. ಇದರಡಿ ಸರ್ಕಾರಿ ನೌಕರರು ತಮ್ಮ ಮೊಬೈಲ್‌ನಲ್ಲಿರುವ 'ಕರ್ತವ್ಯ' ಪ್ ಮೂಲಕ ಹಾಜರಾತಿ ದಾಖಲಿಸಬೇಕು. ಹೊಸ ನಿಯಮದ ಪ್ರಕಾರ, ಪೊಲೀಸ್ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ಪ್ರತಿದಿನ ಬೆಳಗ್ಗೆ 10 ಗಂಟೆಯೊಳಗೆ 'ಚೆಕ್ ಇನ್' ಹಾಗೂ ಕರ್ತವ್ಯ ಮುಗಿದ ಬಳಿಕ 'ಚೆಕ್ ಔಟ್' ಮಾಡುವುದು ಪುಟ 2ಕ್ಕೆ

### ಅಕ್ರಮ ಕೇರಳ ಲಾಟರಿ ಮಾರಾಟ: ಇಬ್ಬರ ಬಂಧನ

**ಚಾಮರಾಜನಗರ:** ಅಕ್ರಮವಾಗಿ ಕೇರಳ ಲಾಟರಿ ಟಿಕೆಟ್‌ಗಳನ್ನು ಮಾರಾಟ ಮಾಡುತ್ತಿದ್ದ ಇಬ್ಬರನ್ನು ಪೊಲೀಸರು ಬಂಧಿಸಿದ್ದಾರೆ.

ಮೈಸೂರು ಮೂಲದ ಚಿನ್ನತಂಬಿನಾಯ್ಡು (86) ಹಾಗೂ ಯಳಂದೂರಿನ ಮಹೇಶ್ (25) ಬಂಧಿತ ಆರೋಪಿಗಳಾಗಿದ್ದಾರೆ. ಇವರಿಂದ ಒಟ್ಟು 2,240 ಕೇರಳ ಲಾಟರಿ ಟಿಕೆಟ್‌ಗಳನ್ನು ವಶಪಡಿಸಿಕೊಳ್ಳಲಾಗಿದ್ದು, ಅವುಗಳ ಮೌಲ್ಯ ಸುಮಾರು 1.12 ಲಕ್ಷ ರೂಪಾಯಿ ಎಂದು ಪೊಲೀಸರು ತಿಳಿಸಿದ್ದಾರೆ.

ಗುಂಡ್ಲುಪೇಟೆ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 55 ಸಾವಿರ ರೂಪಾಯಿ ಮೌಲ್ಯದ 1,100 ಟಿಕೆಟ್‌ಗಳು ಹಾಗೂ ಸಂತೇಮರಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 57 ಸಾವಿರ ರೂಪಾಯಿ ಮೌಲ್ಯದ 1,140 ಟಿಕೆಟ್‌ಗಳನ್ನು ಜಪ್ತಿ ಮಾಡಲಾಗಿದೆ. ಈ ಸಂಬಂಧ ಎರಡು ಪ್ರತ್ಯೇಕ ಪ್ರಕರಣಗಳು ದಾಖಲಾಗಿದ್ದು, ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

### ಗುಟ್ಕಾ ಉಗುಳಲು ಕಿಟಕಿ ಮೂಲಕ ತಲೆ ಹೊರಹಾಕಿದ ವಿದ್ಯಾರ್ಥಿ: ಟಿಪ್ಪರ್ ಡಿಕ್ಕಿ ಹೊಡೆದು ತಲೆಯೇ ಕಟ್!

**ಹುಬ್ಬಳ್ಳಿ:** ಬಸ್ ಪ್ರಯಾಣದ ವೇಳೆ ಕಿಟಕಿಯಿಂದ ತಲೆ ಹೊರಹಾಕಿದ್ದ ಯುವಕನಿಗೆ ಹಿಂದಿನಿಂದ ಬಂದ ಟಿಪ್ಪರ್ ಢಿಕ್ಕಿ ಹೊಡೆದ ಪರಿಣಾಮ ಯುವಕನ ರುಂಡ ತುಂಡಾಗಿ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ಧಾರವಾಡ ಜಿಲ್ಲೆಯ ಕುಂದಗೋಳ ತಾಲೂಕಿನ ಶೆರೆವಾಡ ಗ್ರಾಮದ ಸಮೀಪ ನಡೆದಿದೆ.

ಮೃತ ಯುವಕನನ್ನು ಶಿರೂರು ಗ್ರಾಮದ ಪಕ್ಕಿರಯ್ಯ ಚನ್ನಯ್ಯ ಮುತ್ತಳ್ಳಿಮಠ (18) ಎಂದು ಗುರುತಿಸಲಾಗಿದೆ. ಪಕ್ಕಿರಯ್ಯ ಹುಬ್ಬಳ್ಳಿಯಲ್ಲಿ ಐಟಿಐ ವ್ಯಾಸಂಗ ಮಾಡುತ್ತಿದ್ದು, ಲಕ್ಷ್ಮೇಶ್ವರ ಕಡೆಗೆ ತೆರಳುತ್ತಿದ್ದ ಬಸ್ ನಲ್ಲಿ ಪ್ರಯಾಣಿಸುತ್ತಿದ್ದ. ಬಸ್‌ನ ಹಿಂಬದಿ ಆಸನದಲ್ಲಿ ಕುಳಿತಿದ್ದ ಆತ ಕಿಟಕಿಯಿಂದ ತಲೆ ಹೊರ ಹಾಕಿದ್ದಾನೆ ಎನ್ನಲಾಗಿದೆ.



ಇದೇ ವೇಳೆ ಹಿಂದಿನಿಂದ ವೇಗವಾಗಿ ಬಂದ ಟಿಪ್ಪರ್, ಬಸ್‌ಗೆ ಸಮೀಪವಾಗಿ ಹಾದುಹೋಗುವಾಗ ಯುವಕನ ತಲೆಗೆ ತಗುಲಿ ಯುವಕನ ರುಂಡ ತುಂಡಾಗಿ ಕೆಳಗಡೆ ಬಿದ್ದಿದ್ದು, ಸ್ಥಳದಲ್ಲೇ ಮೃತಪಟ್ಟಿದ್ದಾನೆ.

### 1.20 ಲಕ್ಷ ಲಂಚ ಪಡೆಯುತ್ತಿದ್ದ ಭೂಮಾಪಕ ಲೋಕಾಯುಕ್ತ ಬಲೆಗೆ

**ಮೈಸೂರು:** 1.20 ಲಕ್ಷ ರೂಪಾಯಿ ಲಂಚ ಸ್ವೀಕರಿಸುತ್ತಿದ್ದ ವೇಳೆ ನಂಜನಗೂಡು ತಾಲೂಕು ಭೂಮಾಪಕ ಜಯಪ್ರಕಾಶ್ ಅವರನ್ನು ಲೋಕಾಯುಕ್ತ ಅಧಿಕಾರಿಗಳು ಬಣ್ಣ ಬಯಲಾಗಿ ಬಂಧಿಸಿದ್ದಾರೆ.

ಮೈಸೂರಿನ ದಟ್ಟಗಳಿಯ ಸಮೀಪದ ಹೋಟೆಲ್ ಬಳಿ ಲಂಚದ ಹಣ ಪಡೆಯುತ್ತಿದ್ದ ವೇಳೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿ ಆರೋಪಿಯನ್ನು ವಶಕ್ಕೆ ಪಡೆದಿದ್ದಾರೆ.

ಮೂಲತಃ 1.50 ಲಕ್ಷ ರೂಪಾಯಿ ಲಂಚಕ್ಕೆ ಪುಟ 2ಕ್ಕೆ






### ಗ್ಯಾರಂಟಿ ಪರಿಷ್ಕರಣೆ: ಸರ್ಕಾರದ ವಿರುದ್ಧ ಎಚ್‌ಡಿಕೆ ಆರೋಪ

**ಬೆಂಗಳೂರು:** ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳ ಪರಿಷ್ಕರಣೆ ಪ್ರಕ್ರಿಯೆ ಕುರಿತು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಗಂಭೀರ ಆರೋಪ ಮಾಡಿದ್ದಾರೆ. ಗೃಹ ಜ್ಯೋತಿ, ಗೃಹಲಕ್ಷ್ಮಿ ಸೇರಿದಂತೆ ವಿವಿಧ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳ ಮಾಹಿತಿ ಸಂಗ್ರಹವು 2028ರ ವಿಧಾನಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ನಡೆಯುತ್ತಿದೆ ಎಂದು ಅವರು ಆರೋಪಿಸಿದರು.

ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಗೃಹಜ್ಯೋತಿ ಯೋಜನೆಗಾಗಿ ಮನೆ ಮನೆಗೆ ತೆರಳಿ ಪುಟ 2ಕ್ಕೆ

## ಜ್ಞಾನ ಕಂದಕ ನಿವಾರಣೆಗೆ ಕನೆಕ್ಟಿಂಗ್ ಡಾಟ್ಸ್ ಯೋಜನೆ: ಖಂಡ್ರೆ

### ಜರ್ಮನಿಯ ಗೋಥೆ ಸಂಸ್ಥೆಯಿಂದ1.8 ಕೋಟಿ । ಅರಿವು ಕೇಂದ್ರಗಳ ಬಲವರ್ಧನೆಗೆ ಗೋಥೆ ಇನ್ಸ್ ಟಿಟ್ಯೂಟ್ ಜೊತೆ ಒಪ್ಪಂದ

**ಬೆಂಗಳೂರು:** ರಾಜ್ಯದ 5886 ಅರಿವು ಕೇಂದ್ರ (ಗ್ರಾಮ ಗ್ರಂಥಾಲಯಗಳ) ಬಲವರ್ಧನೆಗೆ ಹಾಗೂ ಕಲೆ ಮತ್ತು ಸಂಸ್ಕೃತಿಯ ವಿನಿಮಯಕ್ಕಾಗಿ ಜರ್ಮನಿಯ ಗೋಥೆ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಬಿ ಖಂಡ್ರೆ ತಿಳಿಸಿದ್ದಾರೆ.

ವಿಕಾಸಸೌಧದ ತಮ್ಮ ಕಚೇರಿಯಲ್ಲಿ ಗುರುವಾರ ತಿಳಿವಳಿಕೆ ಒಪ್ಪಂದ ವಿನಿಮಯದ ಬಳಿಕ ಮಾತನಾಡಿದ ಖಂಡ್ರೆ ಅವರು, ಗೋಥೆ ಸಂಸ್ಥೆ ಕಲೆ, ಸಂಸ್ಕೃತಿ ಮತ್ತು ಶಿಕ್ಷಣ ಜಾಲವನ್ನು ರೂಪಿಸುವ ಮೂಲಕ ಗ್ರಾಮೀಣ ಜನರಿಗೆ ವಿಶೇಷವಾಗಿ ವಿದ್ಯಾರ್ಥಿಗಳಿಗೆ ನೆರವಾಗಲಿದೆ ಎಂದರು.

ಅವಧಿಗೆ ಗೋಥೆ ಇನ್ಸ್ ಸ್ಟಿಟ್ಯೂಟ್ ಮುಂದಿನ 2 ವರ್ಷದಲ್ಲಿ 1.8 ಕೋಟಿ ರೂ.ವೆಚ್ಚ ಮಾಡುತ್ತಿದ್ದು, 9 ಲಕ್ಷ ರೂ. ಮೌಲ್ಯದ ಮಕ್ಕಳ ಕಥಾ ಪುಸ್ತಕಗಳನ್ನು ಅರಿವು ಕೇಂದ್ರಗಳಿಗೆ ಕೊಡುಗೆಯಾಗಿ ನೀಡಿದೆ ಎಂದರು.



ಕನೆಕ್ಟಿಂಗ್ ಡಾಟ್ಸ್ ಅಂದರೆ ವಿವಿಧ ಸಂಸ್ಥೆಗಳ ಅನುಭವವನ್ನು ಒಗ್ಗೂಡಿಸಿ, ಗ್ರಾಮೀಣ ಮತ್ತು ನಗರ ಪ್ರದೇಶದ ವಿದ್ಯಾರ್ಥಿಗಳ, ಜನರ ನಡುವೆ ಇರುವ ಜ್ಞಾನ ಕಂದಕವನ್ನು ನಿವಾರಿಸಲು ಒಂದು ಉತ್ತಮ ಸಂಪರ್ಕ ಜಾಲವನ್ನು ರೂಪಿಸುತ್ತದೆ ಎಂದರು.

ಕರ್ನಾಟಕದಲ್ಲಿ 5928 ಗ್ರಾಮ ಪಂಚಾಯ್ತಿಗಳಿದ್ದು, ರಾಜ್ಯದಾದ್ಯಂತ ಒಟ್ಟು 5886 ಅರಿವು ಕೇಂದ್ರ ಅಥವಾ ಗ್ರಾಮೀಣ ಗ್ರಂಥಾಲಯಗಳಿವೆ. ಪುಟ 2ಕ್ಕೆ

### ಜರ್ಮನಿಯಲ್ಲಿ ಉದ್ಯೋಗಾವಕಾಶ

ಜರ್ಮನಿಯಲ್ಲಿ ಕುಶಲ ಕಾರ್ಮಿಕರ ಬೇಡಿಕೆ ಇದ್ದು, ಈ ಯೋಜನೆಯಡಿ ಗ್ರಾಮೀಣ ಭಾಗದ ಕುಶಲ ಯುವಜನರಿಗೆ ಜರ್ಮನ್ ಭಾಷೆಯನ್ನು ಕಲಿಸುವ ಮೂಲಕ ಭಾರತದ ಗ್ರಾಮೀಣ ಅಭ್ಯರ್ಥಿಗಳಿಗೆ ಜರ್ಮನಿಯಲ್ಲಿ ಉದ್ಯೋಗ ಪಡೆಯಲೂ ನೆರವಾಗಲಿದೆ ಎಂದರು. ಸರ್ಕಾರ ಮತ್ತು ಗೋಥೆ ಇನ್ಸ್ಟಿಟ್ಯೂಟ್ ನಡುವೆ ಒಡಂಬಡಿಕೆ ಪತ್ರವನ್ನು ವಿನಿಮಯ ಮಾಡಿಕೊಳ್ಳಲಾಗುತ್ತಿದ್ದು, ಈ ಸಮಾರಂಭಕ್ಕೆ ನಾವೆಲ್ಲರೂ ಸಾಕ್ಷಿಯಾಗಿದ್ದೇವೆ ಎಂದರು. ಜರ್ಮನಿಯಿಂದ ಆಗಮಿಸಿರುವ ಗೋಥೆ ಇನ್ಸ್ ಸ್ಟಿಟೂಟ್‌ನ ನಿರ್ದೇಶಕರಾದ ಮಿಷಲ್ ಐನ್ಸ್ ಸ್ಟಿನ್, ಮ್ಯಾಕ್ಸ್ ಪುಟ 2ಕ್ಕೆ

# 17 ಮಾಲೀಕರಿಗೆ 46 ಕೋಟಿ ಪರಿಹಾರ ವಿತರಣೆ



ರಾಮನಗರ: ಬಿಡದಿ ಹೋಬಳಿಯಲ್ಲಿ ಉದ್ದೇಶಿತ ಸಮಗ್ರ ನಗರ ನಿರ್ಮಾಣ ಯೋಜನೆಗೆ ಸಂಬಂಧಿಸಿದಂತೆ ಭೂಸ್ವಾಧೀನಕ್ಕೆ ಒಪ್ಪಿಗೆ ನೀಡಿದ್ದ ಭೂಮಾಲೀಕರಿಗೆ ಪರಿಹಾರದ ಚೆಕ್ಕುಗಳನ್ನು ವಿತರಿಸುವ ಪ್ರಕ್ರಿಯೆ ಮುಂದುವರೆದಿದೆ.

ಗುರುವಾರ 17 ಮಂದಿಗೆ ಒಟ್ಟು 46 ಕೋಟಿ, 7 ಲಕ್ಷ 25 ಸಾವಿರ 836 ರೂಗಳ ಪರಿಹಾರವನ್ನು ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಜಿಬಿಡಿಎ) ಅಧ್ಯಕ್ಷ ಗಾಣಕಲ್ ನಟರಾಜ್ ವಿತರಿಸಿದರು. ಕೆಂಪಯ್ಯನ ಪಾಳ್ಯದ 15 ಮಂದಿ ಮತ್ತು ವಡೇರಹಳ್ಳಿಯ ಇಬ್ಬರು ಭೂಮಾಲೀಕರು ಜಿಬಿಡಿಎ ಅಧ್ಯಕ್ಷರಿಂದ ಚೆಕ್ಕುಗಳನ್ನು ಸ್ವೀಕರಿಸಿದರು.

ಈ ವೇಳೆ ಮಾತನಾಡಿದ ಅಧ್ಯಕ್ಷ ಗಾಣಕಲ್ ನಟರಾಜ್, ಭೂಸ್ವಾಧೀನಕ್ಕೆ ಒಪ್ಪಿಗೆ ನೀಡಿದ್ದ 17 ಮಂದಿ ರೈತರಿಗೆ ಪರಿಹಾರವನ್ನು ವಿತರಿಸುತ್ತಿದ್ದೇವೆ ಎಂದರು.

ಇದರೊಟ್ಟಿಗೆ ನಿವೇಶನವನ್ನು ಎನ್‌ಟೈಟಲ್‌ಮೆಂಟ್ ಸೆಟಲ್‌ಮೆಂಟ್ ಅಡಿಯಲ್ಲಿ ಕೊಡುವುದಾಗಿ ತಿಳಿಸಿದ್ದೆವು. ನಟರಾಜ್ ಅವರಿಗೆ ವಸತಿ ನಿವೇಶನ ಮತ್ತು ಲೋಕೇಶ್ ಅವರಿಗೆ ವಾಣಿಜ್ಯ ನಿವೇಶನವನ್ನು ನೀಡಲಾಗುತ್ತಿದೆ. ಇಂದು ಇಬ್ಬರಿಗೆ ಸಾಂಕೇತಿಕವಾಗಿ ನಿವೇಶನದ ದೃಢಿಕರಣ ಪತ್ರಗಳನ್ನು ನೀಡುತ್ತಿದ್ದೇವೆ, ಈ ಪ್ರಕ್ರಿಯೆ ಜಾರಿಯಲ್ಲಿರಲಿದೆ ಎಂದು ಅವರು ತಿಳಿಸಿದರು. ಹೀಗೆ ನೀಡುವ ದೃಢೀಕರಣ ಪತ್ರಗಳಲ್ಲಿ ಮಂಜೂರಾಗಿರುವವರ ಫೋಟಗಳು ಇರುತ್ತವೆ. ನಕಲು ಮಾಡಲು ಸಾಧ್ಯವಾಗದಂತೆ ಎಲ್ಲ ಎಚ್ಚರಗಳನ್ನುವಹಿಸಲಾಗಿದೆ ಎಂದರು.

ಚೆಕ್ ಕೊಡ್ತಾರೆ, ನಗದಾಗೋಲ್ಲ ಎಂಬ ಊಹಾಪೋಹಗಳನ್ನು ಜಿಬಿಡಿಎ ವಿರುದ್ಧ ಹರಡಲಾಗುತ್ತಿದೆ. ಇಲ್ಲಿಯವರೆಗೆ 32 ಮಂದಿಗೆ ಚೆಕ್‌ಗಳನ್ನು ವಿತರಿಸಿದ್ದೇವೆ, ಆದರೆ ಎಲ್ಲಾ ಮಾಲೀಕರಿಗೂ ಆರ್.ಟಿ.ಜಿ.ಎಸ್ ಮೂಲಕವೇ ಹಣ ಪಾವತಿಯಾಗುತ್ತಿದೆ ಎಂದು ಸ್ಪಷ್ಟಪಡಿಸಿದರು. ಎಲ್ಲವೂ ಪಾರದರ್ಶಕವಾಗಿ ನಡೆಯುತ್ತಿದೆ. ಹಾಗೊಮ್ಮೆ ಯಾವುದೇ ರೈತರಿಗೆ, ಭೂಮಾಲೀಕರಿಗೆ ಅನುಮಾನಗಳಿದ್ದರೆ ಅವರು ತಮ್ಮನ್ನಾಗಲಿ, ಅಧಿಕಾರಿಗಳನ್ನಾಗಲಿ ಸಂಪರ್ಕಿಸಬಹುದು. ದಲ್ಲಾಳಿಗಳಿಗೆ ಇಲ್ಲಿ ಅವಕಾಶವಿಲ್ಲ. ಸುಳ್ಳು ಅಪಪ್ರಚಾರಗಳಿಗೆ ಅವಕಾಶ ಕೊಡಬಾರದು ಎಂದು ಅವರು ನಾಗರೀಕರಿಗೆ ಮನವಿ ಮಾಡಿದರು. ಜಿಬಿಡಿಎ ಅಧಿಕರಿ ಮಾರುತಿ ಪ್ರಸನ್ನ ಉಪಸ್ಥಿತರಿದ್ದರು.

# ಹಿರಿಯ ಪೊಲೀಸರಿಗೆ ಕಾರ್ಯಾಗಾರ



ಮೈಸೂರು: ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದ ಆದೇಶದಲ್ಲಿನ ನಿರ್ಣಯದಂತೆ ಹಾಗೂ ತರಬೇತಿ ವಿಭಾಗದ ಎ.ಡಿ.ಜಿ.ಪಿ ರವರ ಸೂಚನೆ ಮೇರೆಗೆ ತನಿಖಾಧಿಕಾರಿಗಳ ತನಿಖಾ ಲೋಪಗಳನ್ನು "ಲೋಪಗಳ ಪತ್ತೆ, ಕೊರತೆಗಳ ನಿವಾರಣೆ ಮತ್ತು ತಿದ್ದುಪಡಿ ಕ್ರಮಗಳು" ಎಂಬ ವಿಷಯದ ಬಗ್ಗೆ ಕಾರ್ಯಾಗಾರವನ್ನು ಎರಡು ತಿಂಗಳಿಗೊಮ್ಮೆ ಕೆ.ಪಿ.ಎ ಘಟಕದಲ್ಲಿ ಹಮ್ಮಿಕೊಳ್ಳಲಾಗುತ್ತಿದೆ.

ಅಕಾಡೆಮಿಯಲ್ಲಿ ತನಿಖಾಧಿಕಾರಿಗಳ ಕೌಶಲ್ಯ ಅಭಿವೃದ್ಧಿಗಾಗಿ ಎರಡು ದಿನಗಳ ಕಾಲ ಲೋಪಗಳ ಪತ್ತೆ, ಕೊರತೆಗಳ ನಿವಾರಣೆ ಮತ್ತು ತಿದ್ದುಪಡಿ ಕ್ರಮಗಳು 2 ಕಾರ್ಯಾಗಾರವನ್ನು ಏರ್ಪಡಿಸಲಾಗಿತ್ತು. ಕಾರ್ಯಾಗಾರವನ್ನು ದಕ್ಷಿಣ ವಲಯ ಪೊಲೀಸ್ ಮಹಾ ನಿರೀಕ್ಷಕ ಡಾ. ಎಂ.ಬಿ.ಬೋರಲಿಂಗಯ್ಯ ಉದ್ಘಾಟಿಸಿದರು. ಉದ್ಘಾಟನಾ ಭಾಷಣದಲ್ಲಿ ತನಿಖಾಧಿಕಾರಿಗಳಿಗೆ ಉತ್ತಮ ತನಿಖೆ ಕೈಗೊಳ್ಳುವ ಹಲವು ಮಾರ್ಗೋಪಾಯಗಳನ್ನು ತಿಳಿಸಿಕೊಟ್ಟರು.

ಕಾರ್ಯಾಗಾರದ ವಲಯ ಉದ್ದೇಶದ ಬಗ್ಗೆ ಕರ್ನಾಟಕ ಪೊಲೀಸ್ ಅಕಾಡೆಮಿಯ ನಿರ್ದೇಶಕ ಎನ್.ವಿಷ್ಣುವರ್ಧನ ಪ್ರಸ್ತಾವಿಕ ನುಡಿಗಳನ್ನಾಡಿದರು. ಅಕಾಡೆಮಿಯ ಉಪನಿರ್ದೇಶಕ ಎಸ್.ಎಲ್.ಚೆನ್ನಬಸವಣ್ಣ ಸ್ವಾಗತಿಸಿದರು. ಸಹಾಯಕ ನಿರ್ದೇಶಕ ಎಸ್.ಎನ್ ಸಂದೇಶ ಕುಮಾರ್ ಕಾರ್ಯಾಗಾರವನ್ನು ಸಂಯೋಜಿಸಿದರು.

ಕಾರ್ಯಾಗಾರದಲ್ಲಿ ವಿಶ್ರಾಂತ ನ್ಯಾಯಾಧೀಶ ಸತೀಶ್ ಸಿಂಗ್, ನಿವೃತ್ತ ಅಭಿಯೋಜನ ಉಪನಿರ್ದೇಶಕ ರುದ್ರಯ್ಯ ಗಂಜಿಗಟ್ಟಿ, ನಿವೃತ್ತ ಪಬ್ಲಿಕ್ ಪ್ರಾಸಿಕ್ಯೂಟರ್ ಚಿನ್ನಪ್ಪ, ಮಂಗಳೂರು ವಿಭಾಗದ ಹಿರಿಯ ಕಾನೂನು ಅಧಿಕಾರಿ ಶಿವಪ್ರಸಾದ್ ಆಳ್ವ, ವಿಧಿ ವಿಜ್ಞಾನ ಪ್ರಯೋಗಾಲಯದ ಉಪ ನಿರ್ದೇಶ ಡಾ.ಚಂದ್ರಶೇಖರ್, ಜೆ.ಎಸ್.ಎಸ್ ಕಾನೂನು ವಿದ್ಯಾಲಯದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪ್ರೊ.ಸುರೇಶ್, ನಿವೃತ್ತ ಡಿ.ವೈ.ಎಸ್.ಪಿ ಅಶೋಕನ್, ನಿವೃತ್ತ ವಿಧಿ ವಿಜ್ಞಾನ ಅಧಿಕಾರಿ ರವೀಂದ್ರ ಮುಂತಾದವರು ಭಾಗವಹಿಸಿ ಉಪನ್ಯಾಸ ನೀಡಿದರು.

ರಾಜ್ಯದ ವಿವಿಧ ಜಿಲ್ಲೆಗಳಿಂದ ಸುಮಾರು 57 ಅಧಿಕಾರಿಗಳು ಹಾಗೂ ಅಕಾಡಮಿಯಲ್ಲಿ ಬುನಾದಿ ತರಬೇತಿ ಪಡೆಯುತ್ತಿರುವ 150 ಪಿ.ಎಸ್.ಐ (ಸಿವಿಲ್) ಪ್ರಶಿಕ್ಷಣಾರ್ಥಿಗಳು ಒಟ್ಟು 207 ಜನ ಭಾಗವಹಿಸಿ ತರಬೇತಿಯ ಉಪಯೋಗವನ್ನು ಪಡೆದರು.

ಮೊದಲ ಪುಟದಿಂದ

## ಹಾಜರಾತಿ ಕಡ್ಡಾಯ

ಕಡ್ಡಾಯವಾಗಿದೆ. ಆದರೆ, ಯೋಜನೆ ಜಾರಿಯಾದ ಬಳಿಕವೂ ಕೆಲವು ಸಿಬ್ಬಂದಿ ಇನ್ನೂ 'ಕರ್ತವ್ಯ' ಪ್‌ನಲ್ಲಿ ನೋಂದಣಿ ಮಾಡಿಕೊಳ್ಳದಿರುವುದು ಇಲಾಖೆಯ ಗಮನಕ್ಕೆ ಬಂದಿದೆ. ಇದನ್ನು ಗಂಭೀರವಾಗಿ ಪರಿಗಣಿಸಿರುವ ಸರ್ಕಾರ, ನೋಂದಣಿ ಮಾಡದ ಸಿಬ್ಬಂದಿಯನ್ನು ತಕ್ಷಣ ಗುರುತಿಸಿ ಕಡ್ಡಾಯವಾಗಿ ಪ್‌ನಲ್ಲಿ ನೋಂದಾಯಿಸಿ ಹಾಜರಾತಿ ದಾಖಲಿಸುವಂತೆ ಕ್ರಮ ಕೈಗೊಳ್ಳಲು ಸೂಚಿಸಿದೆ. ಈ ಕುರಿತು ಪೊಲೀಸ್ ಪ್ರಧಾನ ಕಚೇರಿಯ ಉಪ ಪೊಲೀಸ್ ಮಹಾ ನಿರೀಕ್ಷಕ (ಕೇಂದ್ರಸ್ಥಾನ) ಹಾಗೂ ಕೆಎಎಂಎಸ್ ನೋಡಲ್ ಅಧಿಕಾರಿ ಟಿ. ಶ್ರೀಧರ್ ಅವರು ಎಲ್ಲಾ ಘಟಕ ಅಧಿಕಾರಿಗಳಿಗೆ ಜ್ಞಾಪನಾ ಪತ್ರ ರವಾನಿಸಿದ್ದು, ನಿಯಮವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವಂತೆ ನಿರ್ದೇಶನ ನೀಡಿದ್ದಾರೆ.

## ಎಚ್‌ಡಿಕೆ ಆರೋಪ

ಸಮೀಕ್ಷೆ ನಡೆಸುವುದು ಹಾಗೂ ಗೃಹಲಕ್ಷ್ಮಿ, ಶಕ್ತಿ ಯೋಜನೆಗಳ ಫಲಾನುಭವಿಗಳಿಂದ ಫೋಟೋ ಸಂಗ್ರಹಿಸುವ ಮೂಲಕ ಸರ್ಕಾರ ಅಮಾಯಕ ಜನರ ವೈಯಕ್ತಿಕ ಮಾಹಿತಿಯನ್ನು ಕಲೆಹಾಕುತ್ತಿದೆ ಎಂದು ಟೀಕಿಸಿದರು. ಈ ಮಾಹಿತಿಯನ್ನು ಮುಂದಿನ ವಿಧಾನಸಭಾ ಚುನಾವಣೆಯ ರಾಜಕೀಯ ತಂತ್ರ ರೂಪಿಸಲು ಬಳಸುವ ಉದ್ದೇಶ ಸರ್ಕಾರಕ್ಕಿದೆ ಎಂದು ಕುಮಾರಸ್ವಾಮಿ ಆರೋಪಿಸಿದರು.

ಅಲ್ಲದೆ, ಅರ್ಹ ಫಲಾನುಭವಿಗಳನ್ನು ಗುರುತಿಸುವ ನೆಪದಲ್ಲಿ ಸರ್ಕಾರ ಹಿಂದೆ ನೀಡಿದ್ದ 'ಎಲ್ಲರಿಗೂ ಉಚಿತ' ಎಂಬ ಭರವಸೆಯಿಂದ ಹಿಂದೆ ಸರಿಯುತ್ತಿದೆ. ಅನರ್ಹರ ಹೆಸರನ್ನು ಗ್ಯಾರಂಟಿ ಯೋಜನೆಗಳ ಪಟ್ಟಿಯಿಂದ ಕೈಬಿಡುವ ಕೆಲಸ ನಡೆಯುತ್ತಿದೆ ಎಂದು ಅವರು ಹೇಳಿದರು. ಮೂರು ವರ್ಷಗಳ ಕಾಲ ಯಾವುದೇ ಪರಿಷ್ಕರಣೆ ನಡೆಸದ ಸರ್ಕಾರ ಈಗ ದಿಢೀರ್ ಈ ಪ್ರಕ್ರಿಯೆ ಆರಂಭಿಸಿರುವುದು ಹಲವು ಅನುಮಾನಗಳಿಗೆ ಕಾರಣವಾಗಿದೆ ಎಂದು ಕುಮಾರಸ್ವಾಮಿ ಆರೋಪಿಸಿದರು.

## ವರದಿ ಬಳಿಕ ಕ್ರಮ: ಡಿಕೆ ಶಿವಕುಮಾರ್

ಮೊದಲು ಅಧಿಕೃತ ಮಾಹಿತಿ ಬರಲಿ. ಬಳಿಕ ಸರ್ಕಾರದ ನಿಯಮಾನುಸಾರ ಪರಿಹಾರ ಘೋಷಿಸಲಾಗುವುದು. ಇಂತಹ ಘಟನೆಗಳು ಮರುಕಳಿಸದಂತೆ ಅಗತ್ಯ ಮುನ್ನೆಚ್ಚರಿಕೆ ವಹಿಸಲಾಗುವುದು ಎಂದು ಭರವಸೆ ನೀಡಿದರು.

## ಕಲ್ಲು ಕ್ವಾರಿಯಲ್ಲಿ ಬಂಡೆ ಕುಸಿತ: 7 ಕಾರ್ಮಿಕರ ದುರಂತ ಸಾವು

ಇರುವುದನ್ನು ಗಮನಿಸದೆ ಎರಡು-ಮೂರು ಬೃಹತ್ ಬಂಡೆಗಳನ್ನು ಕೆಳಕ್ಕೆ ತಳ್ಳಿದ್ದರಿಂದ ಅವು ಕಾರ್ಮಿ ಕರ ಮೇಲೆ ಬಿದ್ದಿವೆ. ಪರಿಣಾಮ ಸ್ಥಳದಲ್ಲೇ ಏಳು ಮಂದಿ ಸಾವನ್ನಪ್ಪಿದ್ದಾರೆ.

ಅವಘಡದ ಸುದ್ದಿ ತಿಳಿಯುತ್ತಿದ್ದಂತೆ ತಾವರೆ ಕೆರೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದಾರೆ.

ಮೃತ ಕಾರ್ಮಿಕರು ಬಿಹಾರ ಮೂಲದ ಕೂಲಿ ಕಾರ್ಮಿಕರು ಎಂದು ತಿಳಿದುಬಂದಿದೆ. ಘಟನೆಗೆ ನಿಖರ ಕಾರಣ ಏನು ಎಂಬುದು ತನಿಖೆಯ ಬಳಿಕವೇ ಸ್ಪಷ್ಟವಾಗಲಿದೆ.

## ದ್ರೌಪತಿ ಮುರ್ಮು ಸಂತಾಪ

"ಕರ್ನಾಟಕದ ಬೆಂಗಳೂರು ನಗರ ಜಿಲ್ಲೆಯ ಕಲ್ಲು ಕ್ವಾರಿಯಲ್ಲಿ ಸಂಭವಿಸಿದ ಜೀವಹಾನಿಯಿಂದ ದುಃಖಿತಳಾಗಿದ್ದೇನೆ. ಇದು ಅತ್ಯಂತ ನೋವಿನ ಘಟನೆ. ಮೃತರ ಕುಟುಂಬಗಳಿಗೆ ನನ್ನ ಹೃತ್ಪೂರ್ವಕ ಸಂತಾಪಗಳು. ಗಾಯಗೊಂಡವರು ಶೀಘ್ರವಾಗಿ ಚೇತರಿಸಿಕೊಳ್ಳಲಿ ಎಂದು ಪ್ರಾರ್ಥಿಸುತ್ತೇನೆ" ಎಂದು ಮುರ್ಮು ಎಕ್ಸ್ ನಲ್ಲಿ ಪೋಸ್ಟ್ ಮಾಡಿದ್ದಾರೆ.

## ಜರ್ಮನಿಯಲ್ಲಿ ಉದ್ಯೋಗಾವಕಾಶ

**ಮುಲ್ಲರ್ ಭವನದ ಪ್ರಧಾನ ಗ್ರಂಥಪಾಲಕರಾದ ಶೇಷಗಿರಿ ಕುಲಕರ್ಣಿ, ಇಲಾಖೆ ಕಾರ್ಯದರ್ಶಿಗಳಾದ ಡಿ. ರಂದೀಪ್, ಆಯುಕ್ತರಾದ ಡಾ. ಅರುಂಧತಿ ಚಂದ್ರಶೇಖರ್ ಮೊದಲಾದವರು ಉಪಸ್ಥಿತರಿದ್ದರು.**

# ಎಂಎಲ್‌ಸಿ ಸ್ಥಾನಕ್ಕೆ ಆಗ್ರಹ

## ಮಡಿವಾಳ ಸಮುದಾಯವನ್ನು ಪರಿಗಣಿಸಲು ಸಿಎಂಗೆ ಆಗ್ರಹ



ರಾಮನಗರದ ಮಡಿವಾಳ ಮಾಚಿದೇವ ದೇವಸ್ಥಾನದ ಆವರಣದಲ್ಲಿ ನಡೆದ ಸಭೆಯಲ್ಲಿ ಜಿಲ್ಲಾಧ್ಯಕ್ಷ ಮಂಟೆದಯ್ಯ ಮಾತನಾಡಿದರು. ಲೋಕೇಶ್, ವೀರಭದ್ರಯ್ಯ, ಟಿ.ಎಂ.ಶ್ರೀನಿವಾಸ್ ಇತರರು ಇದ್ದರು.

ರಾಮನಗರ; ಮಡಿವಾಳ ಸಮುದಾಯದ ಕ್ರಿಯಾಶೀಲ ಯುವ ನಾಯಕ ಕೆ.ವಿ. ಅಮರನಾಥ್‌ರನ್ನು ವಿಧಾನ ಪರಿಷತ್ ಸದಸ್ಯರನ್ನಾಗಿ ನೇಮಕ ಮಾಡಬೇಕು ಎಂದು ರಾಮನಗರ ಹಾಗೂ ಮಾಗಡಿ ತಾಲೂಕು ಮಡಿವಾಳರ ಸಂಘದ ಅಧ್ಯಕ್ಷರುಗಳು ಮತ್ತು ಪದಾಧಿಕಾರಿಗಳು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಲ್ಲಿ ಮನವಿ ಮಾಡಿ ಒತ್ತಾಯಿಸಿದ್ದಾರೆ.

ನಗರದಲ್ಲಿರುವ ಮಡಿವಾಳ ಮಾಚಿದೇವ ದೇವಸ್ಥಾನದ ಆವರಣದಲ್ಲಿ ನಡೆದ ಸುದ್ದಿಗೋಷ್ಠಿ ಯಲ್ಲಿ ರಾಮನಗರ ಘಟಕದ ಅಧ್ಯಕ್ಷ ಮಂಟೇದಯ್ಯ ಮಾತನಾಡಿ, ಮಡಿವಾಳ ಸಮುದಾಯ ತೀರಾ ಹಿಂದು ಳಿದಿದೆ. ಕ್ರಿಯಾಶೀಲ ಯುವ ನಾಯಕ ಕೆ.ವಿ. ಅಮರನಾಥ್ ಬಗ್ಗೆ ಸಮುದಾಯದಲ್ಲಿ ಒಲವಿದೆ. ಇವರಿಗೆ ಸೂಕ್ತ ಸ್ಥಾನಮಾನ ನೀಡುವುದರ ಮೂಲಕ ಕಾಂಗ್ರೆಸ್ ಸರ್ಕಾರ ಮಡಿವಾಳ ಸಮುದಾಯಕ್ಕೆ ಸಾಮಾಜಿಕ ನ್ಯಾಯ ಒದಗಿಸ ಬೇಕು ಎಂದು ಅವರು ಆಗ್ರಹಿಸಿದರು.

ಕಳೆದ ವರ್ಷ ತುಮಕೂರಿನಲ್ಲಿ ಮಡಿವಾಳ ಸಮುದಾಯ ಏರ್ಪಡಿಸಿದ್ದ ಸಮಾರಂಭವೊಂದರಲ್ಲಿ ಭಾಗವಹಿಸಿದ್ದ ಡಿ.ಕೆ.ಶಿವಕುಮಾರ್ ಅವರು, ಕೆ.ವಿ. ಅಮರನಾಥ್‌ಗೆ ರಾಜಕೀಯವಾಗಿ ಸೂಕ್ತ ಸ್ಥಾನಮಾನ ನೀಡುವುದಾಗಿ ಭರವಸೆ ನೀಡಿದ್ದರು. ಈಗ ಡಿ.ಕೆ.ಶಿವಕುಮಾರ್ ಅವರೇ ಮುಖ್ಯಮಂತ್ರಿಯಾಗಿದ್ದಾರೆ. ಮಡಿವಾಳ ಸಮುದಾಯಕ್ಕೆ ಸಾಮಾಜಿಕ ನ್ಯಾಯ ಒದಗಿಸುವ ಅವಕಾಶವೂ ಇದೆ. ಹೀಗಾಗಿ ತೀರ ಹಿಂದುಳಿದ ಮಡಿವಾಳ ಸಮಾಜದ ಯುವ ನಾಯಕ ಕೆ.ವಿ.ಅಮರನಾಥ್‌ಗೆ ತಮ್ಮ ಮಂತ್ರಿ ಮಂಡಲದಲ್ಲಿ ಖಾಲಿ ಇರುವ ನಾಲ್ಕು ಸ್ಥಾನಗಳಲ್ಲಿ ಪಕ್ಷದ ಸಂಘಟನೆಯ ಹಿತಾದೃಷ್ಟಿಯಿಂದ ಪಕ್ಷದ ಬಲವರ್ಧನೆಗಾಗಿ ಕೆ.ವಿ. ಅಮರನಾಥ್ ಅವರನ್ನು ವಿಧಾನ ಪರಿಷತ್ ಸದಸ್ಯರನ್ನಾಗಿ ನೇಮಕ ಮಾಡುವ ಮೂಲಕ ಸಾಮಾಜಿಕ ನ್ಯಾಯ ಒದಗಿಸುವಂತೆ ಮಂಟೆದಯ್ಯ ಇತರರು ಆಗ್ರಹಿಸಿದರು. ಬೆಂಗಳೂರು ದಕ್ಷಿಣ ಜಿಲ್ಲಾ ಮಡಿವಾಳರ ಸಂಘದ ಪ್ರಧಾನ ಕಾರ್ಯದರ್ಶಿ ಲೋಕೇಶ್, ಉಪಾಧ್ಯಕ್ಷ ಜಿ.ಕೆ. ಚಂದ್ರಶೇಖರ್, ರಾಮನಗರ ತಾಲೂಕು ಸಂಘದ ಅಧ್ಯಕ್ಷ ವೀರಭದ್ರಯ್ಯ, ಪುಟ್ಟ ಸ್ವಾಮಿ, ನಾಗರಾಜು, ಮೋಹನ್. ರವಿಕುಮಾರ್, ನಾಗರಾಜು, ಕುಮಾರ್, ಯೋಗೇಶ್, ಸಂತೋಷ್ ಇದ್ದರು.

### ಅಹಿಂದ ವರ್ಗದಲ್ಲಿ ಮೈಕ್ರೋಸ್ಕೋಪಿಕ್ ಸಮುದಾಯ ನಮ್ಮದು – ಟಿ.ಎಂ.ಶ್ರೀನಿವಾಸ್

**ಮಾಗಡಿ ಮಡಿವಾಳರ ಸಂಘದ ಅಧ್ಯಕ್ಷ ಟಿ. ಎಂ.ಶ್ರೀನಿವಾಸ್ ಮಾತನಾಡಿ, ಕಾಂಗ್ರೆಸ್ ಪಕ್ಷದಲ್ಲಿ ಮಾತ್ರ ಸಾಮಾಜಿಕ ಬದ್ಧತೆ ಇರುವುದು ಸಂವಿಧಾನತ್ಮವಾಗಿ ಅಹಿಂದ ವರ್ಗದ ಅದರಲ್ಲೂ ಮೈಕ್ರೋಸ್ಕೋಪಿಕ್ ಸಮಾಜ ಯಾವುದಾದರು ಇದೆ ಎಂದರೆ ಅದು ಮಡಿವಾಳ ಸಮುದಾಯ. ಕೆ.ವಿ.ಅಮರನಾಥ್ ಒಬ್ಬ ಕ್ರಿಯಾಶೀಲ ಸಂಘಟನಾ ಚತುರ, ಕಾಂಗ್ರೆಸ್ ಪಕ್ಷದಲ್ಲಿ ರಾಜಕೀಯವಾಗಿ ಅವರಿಗೆ ಸ್ಥಾನಮಾನ ಸಿಕ್ಕರೆ ಆ ಪಕ್ಷದ ಸಂಘಟನೆಗೆ ತಮ್ಮದೇ ಆದ ರೀತಿಯಲ್ಲಿ ಬದ್ಧತೆ ಮೆರೆಯಲಿದ್ದಾರೆ. ಈಗಾಗಲೇ ಮಡಿವಾಳ ಸಮುದಾಯವನ್ನು ಒಗ್ಗಟ್ಟಿಗೆ ಅವರು ಹಗಲಿರುಳು ದುಡಿದಿದ್ದಾರೆ. ಇವರಿಗೆ ಕಾಂಗ್ರೆಸ್ ಪಕ್ಷದ ವರಿಷ್ಠರು, ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪ್ರಾಮಾಣಿಕವಾಗಿ ನುಡಿದಂತೆ ನಡೆದಿದ್ದೇವೆ ಎಂಬ ಸಂಕಲ್ಪದೊಂದಿಗೆ ಅಮರನಾಥ್ ಅವರನ್ನು ವಿಧಾನ ಪರಿಷತ್ ಸದಸ್ಯರನ್ನಾಗಿ ನೇಮಕ ಮಾಡುವ ಮೂಲಕ ರಾಜಕೀಯವಾಗಿ ಶಕ್ತಿ ತುಂಬಲಿದ್ದಾರೆ ಎಂಬ ವಿಶ್ವಾಸವಿದೆ ಎಂದು ತಿಳಿಸಿದರು.**


ಶ್ರೀರಾಂಪುರ ಪಟ್ಟಣ ಪಂಚಾಯಿತಿ ಕಾರ್ಯಾಲಯ, ಮೈಸೂರು ಜಿಲ್ಲೆ- 570008

ದೂರವಾಣಿ ಸಂಖ್ಯೆ: 0821-2330109 Email: ka.srirampur.tp@gmail.com

ಶ್ರೀ.ವ.ಪಂ.ಕಾ/ಜೆ.ಇ/ಟೆಂ.ಪ್ರ.02/02/2026-27 ದಿನಾಂಕ: 30.06.2026

**ಟೆಂಡರ್ ಪ್ರಕಟಣೆ**

**ಈ ಪ್ರಕಟಣೆ ಕೆ.ಪಿ.ಪಿ-ಪೋರ್ಟಲ್ ಮುಖಾಂತರ ಮಾತ್ರ**

ಶ್ರೀರಾಂಪುರ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿರವರು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999-2000ರ ಪ್ರಕಾರ ಕೆಡಬ್ಲ್ಯೂ-1 ನಿಯಮದನ್ವಯ ಕೆ.ಪಿ.ಪಿ.-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ 2026-27ನೇ ಸಾಲಿನ ಎಸ್.ಎಫ್.ಸಿ ಹಾಗೂ ಕುಡಿಯುವ ನೀರಿನ ಯೋಜನೆಯ ಉಳಿಕೆ ಅನುದಾನ ಮತ್ತು ಪಂಚಾಯಿತಿ ನಿಧಿ ಯೋಜನೆಯ ಕೆಳಗಿನ ಕಾಮಗಾರಿಗೆ ಅರ್ಹ ನೋಂದಾಯಿತ ಗುತ್ತಿಗೆದಾರರಿಂದ ಟೆಂಡರುಗಳನ್ನು ಆಹ್ವಾನಿಸಲಾಗಿದೆ. ಇ-ವೆಬ್‌ಸೈಟ್ https://kppp.karnataka.gov.in ಮೂಲಕ ಇಎಂಡಿ, ಗುತ್ತಿಗೆ ಮತ್ತು ಇತರೆ ಶರತ್ತುಗಳನ್ನು ಗಮನಿಸಿಕೊಳ್ಳುವುದು. ಹೆಚ್ಚಿನ ವಿವರಗಳನ್ನು ಕಛೇರಿ ವೇಳೆಯಲ್ಲಿ ಸಂಬಂಧಿಸಿದವರಿಂದ ಮತ್ತು ವೆಬ್‌ಸೈಟ್ www.srirampuratown.mrc.gov.in ನಿಂದ ಪಡೆದುಕೊಳ್ಳಬಹುದು.

ಟೆಂಡರ್ ಅರ್ಜಿ ಸಲ್ಲಿಸಲು ಅಂತಿಮ ದಿನಾಂಕ: 15.07.2026 ಸಂಜೆ 5.30 ಸ್ವೀಕೃತವಾದ ದರ ಟೆಂಡರ್ ತೆರೆಯುವ ದಿನಾಂಕ: 17.07.2026 ಪೂರ್ವಾಹ್ನ 11.00 ಗಂಟೆಗೆ.

| ಕ್ರ. ಸಂ. | ವಿವರ | ಟೆಂಡರ್‌ಗಿಟ್ಟ ಮೊತ್ತ (ಲಕ್ಷಗಳಲ್ಲಿ) | ಇ.ಎಂ.ಡಿ. ಮೊತ್ತ (ರೂಗಳಲ್ಲಿ) | ಮೀಸಲಾತಿ |
|---|---|---|---|---|
| 01 | DMA/2026-27/TP/WORK INDENT60360 | 2.10 | 5250.00 | Others |
| 02 | DMA/2026-27-0W/WORK INDENT60427 | 1.98 | 4950.00 | Others |
| 03 | DMA/2026-27/OW/WORK INDENT60428 | 0.87 | 2175.00 | Others |
| 04 | DMA/2026-27/WS/WORK INDENT60359 | 6.75 | 8450,00 | SC |
| 05 | DMA/2026-27/RD/WORK INDENT60358 | 8.75 | 10950.00 | CAT2A |

ಸೂಚನೆ: ಹೆಚ್ಚಿನ ವಿವರ ಹಾಗೂ ಮಾಹಿತಿಗಳನ್ನು https://kppp.karnataka.gov.in ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು.

ಸಹಿ/- (ಮಹೇಶ್ ಕುಮಾರ್.ಕೆ.ಎಮ್)
ಆಡಳಿತಾಧಿಕಾರಿಗಳು
ಪಟ್ಟಣ ಪಂಚಾಯಿತಿ ಶ್ರೀರಾಂಪುರ.

ಸಹಿ/- (ಎ.ಎಮ್. ಶ್ರೀಧರ್)
ಮುಖ್ಯಾಧಿಕಾರಿ
ಪಟ್ಟಣ ಪಂಚಾಯಿತಿ ಶ್ರೀರಾಂಪುರ.

DIPR/DDMYS/391/KSMCA/263/2026-27


ಮೊದಲ ಪುಟದಿಂದ

## ಭೂಮಾಪಕ ಲೋಕಾಯುಕ್ತ ಬಲೆಗೆ

ಬೇಡಿಕೆ ಇಟ್ಟಿದ್ದ ಜಯಪ್ರಕಾಶ್, ಬಳಿಕ 1.30 ಲಕ್ಷ ರೂಪಾಯಿಗೆ ಒಪ್ಪಿಕೊಂಡಿದ್ದರು ಎನ್ನಲಾಗಿದೆ. ಅದರಂತೆ ಇಂದು 1.20 ಲಕ್ಷ ರೂಪಾಯಿ ಸ್ವೀಕರಿಸುತ್ತಿದ್ದ ವೇಳೆ ಲೋಕಾಯುಕ್ತ ಅಧಿಕಾರಿಗಳು ಕಾರ್ಯಾಚರಣೆ ನಡೆಸಿ ಅವರನ್ನು ಬಂಧಿಸಿದ್ದಾರೆ. ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಟಿ.ಜೆ. ಉದೇಶ್ ಅವರ ಮಾರ್ಗದರ್ಶನದಲ್ಲಿ ಈ ದಾಳಿ ನಡೆದಿದ್ದು, ಪ್ರಕರಣದ ಕುರಿತು ಹೆಚ್ಚಿನ ತನಿಖೆ ಮುಂದುವರಿದಿದೆ.


## ಕನೆಕ್ಟಿಂಗ್ ಡಾಟ್ಸ್ ಯೋಜನೆ:

ಈ ಎಲ್ಲ ಗ್ರಂಥಾಲಯಗಳಲ್ಲಿರುವ ಮೇಲ್ವಿಚಾರಕರು ಅಂದರೆ ಗ್ರಂಥಪಾಲಕರ ಸಾಮರ್ಥ್ಯ ಬಲವರ್ಧನೆಗೆ ಪಂಚಾಯತ್ ರಾಜ್ ಇಲಾಕೆ ಮತ್ತು ಗೋಥೆ ಸಂಸ್ಥೆ ಒಗ್ಗೂಡಿ ಶ್ರಮಿಸಲಿವೆ ಎಂದರು. ಜೊತೆಗೆ ಕಲೆ, ಸಂಸ್ಕೃತಿಯ ವಿನಿಮಯ ಕಾರ್ಯಕ್ರಮದಡಿ ಕರ್ನಾಟಕದ ಗ್ರಾಮೀಣ ಕಲೆಗಳನ್ನು ಜರ್ಮನಿಯ ಜನರಿಗೆ ಪರಿಚಯಿಸುವ ಅದೇ ರೀತಿಯಲ್ಲಿ ಜರ್ಮನಿಯ ಸಾಂಸ್ಕೃತಿಕ ಕಲೆಗಳನ್ನು ಕರುನಾಡ ಗ್ರಾಮೀಣ ಜನತೆಗೆ ವಿಶೇಷವಾಗಿ ಯುವಜನರಿಗೆ ಪರಿಚಯಿಸುವ ವಿನಿಮಯ ಕಾರ್ಯಕ್ರಮವನ್ನೂ ಆಯೋಜಿಸುತ್ತದೆ ಎಂದರು.

## ರಾಜ್ಯಪಾಲರ ಹಸಿರು ನಿಶಾನೆ

ವಿತರಿಸಲಾಗಿದೆ. ಇದರ ಮೂಲಕ ಯಾತ್ರಿಕರ ಚಲನವಲನವನ್ನು ನಿರಂತರವಾಗಿ ಮೇಲ್ವಿಚಾರಣೆ ಮಾಡಲಾಗುತ್ತದೆ. ಹೆದ್ದಾರಿಯಲ್ಲಿ ವಾಹನಗಳ ಸಂಚಾರಕ್ಕೂ ವಿಶೇಷ ಮಾರ್ಗಸೂಚಿಗಳನ್ನು ಜಾರಿಗೊಳಿಸಲಾಗಿದೆ.

# ಅವಿಷ್ಕಾರ್ ಹೋಮ್ಸ್ ಕಚೇರಿ ಉದ್ಘಾಟನೆ




**ಮೈಸೂರು:** ವಸತಿ ಹಾಗೂ ವಾಣಿಜ್ಯ ಕಟ್ಟಡ ನಿರ್ಮಾಣ, ಪ್ರಿಫ್ಯಾಬ್ರಿಕೇಟೆಡ್ ಕಟ್ಟಡಗಳು, ಕಂಟೈನರ್ ಹೋಮ್ಸ್, ಸ್ವಯಂ-ಸುಸ್ಥಿರ ಕಟ್ಟಡ ಹಾಗೂ ಎಂಜಿನಿಯರಿಂಗ್ ಸೇವೆಗಳನ್ನು ಒದಗಿಸುತ್ತಿರುವ ಅವಿಷ್ಕಾರ್ ಹೋಮ್ಸ್ ಸಂಸ್ಥೆಯ ನೂತನ ಕಚೇರಿ ಮೈಸೂರಿನ ವಿಜಯನಗರ 2ನೇ ಹಂತ, 80 ಅಡಿ ಹಿಂಕಲ್ ಬೈಪಾಸ್ ರಸ್ತೆಯಲ್ಲಿ ಗುರುವಾರ ಶಾಸಕ ಜಿ.ಟಿ.ದೇವೇಗೌಡ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಸಂಸ್ಥೆಯ ಮಾಲೀಕ ಪುನೀತ್ ಶಿವಶಂಕರ್ ಮಾತನಾಡಿ, "ನೂತನ ಕಚೇರಿಯ ಉದ್ಘಾಟನೆ ನಮ್ಮ ಸಂಸ್ಥೆಯ ಬೆಳವಣಿಗೆಯ ಮತ್ತೊಂದು ಮಹತ್ವದ ಮೈಲಿಗಲ್ಲಾಗಿದೆ. ಗುಣಮಟ್ಟ, ನವೀನತೆ ಮತ್ತು ಸುಸ್ಥಿರತೆಯನ್ನು ಆಧಾರವಾಗಿಟ್ಟುಕೊಂಡು ಗ್ರಾಹಕರ ನಿರೀಕ್ಷೆಗಳನ್ನು ಈಡೇರಿಸುವ ಕಾರ್ಯವನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಮುಂದುವರಿಸುತ್ತೇವೆ. ನಮ್ಮ ಬೆಳವಣಿಗೆಯ ಪಯಣದಲ್ಲಿ ಬೆಂಬಲ ನೀಡಿದ ಪ್ರತಿಯೊಬ್ಬರಿಗೂ ಹೃತ್ಪೂರ್ವಕ ಧನ್ಯವಾದಗಳು. ಮುಂದೆಯೂ ವಿಶ್ವಾಸಾರ್ಹ ಸೇವೆ ನೀಡುವ ಮೂಲಕ ಸಮಾಜದ ನಿರೀಕ್ಷೆಗಳಿಗೆ ತಕ್ಕಂತೆ ಕಾರ್ಯನಿರ್ವಹಿಸುತ್ತೇವೆ," ಎಂದು ಹೇಳಿದರು.

### ಮಂಡ್ಯದ ಸಾಯಿ ಗುರುಕುಲದಿಂದ ಅಮೋಘ ಪ್ರದರ್ಶನಕ್ಕೆ ಸಿದ್ಧತೆ

# ಸತ್ಯ ಸಾಯಿ ಗ್ರಾಮದಲ್ಲಿ ಸುವರ್ಣ ಮಹೋತ್ಸವ ಸಂಭ್ರಮಾಚರಣೆ



ಮಂಡ್ಯ: ಪ್ರಸ್ತುತ ಮಂಡ್ಯ ಜಿಲ್ಲೆಯ ಮಾರದೇವನಹಳ್ಳಿಯಲ್ಲಿರುವ ಪ್ರತಿಷ್ಠಿತ ವಿದ್ಯಾಸಂಸ್ಥೆ ಶ್ರೀ ಸತ್ಯ ಸಾಯಿ ಶಾರದಾನಿಕೇತನಂ ಗುರುಕುಲದ 200ಕ್ಕೂ ಅಧಿಕ ಬಾಲಕರು, ಶಾಲೆಯ ಮುಖ್ಯಕೇಂದ್ರವಾದ ಚಿಕ್ಕಬಳ್ಳಾಪುರದ ಮುದ್ದೇನಹಳ್ಳಿಯಲ್ಲಿ ಆಯೋಜನೆಗೊಂಡಿರುವ ವಾರ್ಷಿಕ ಕ್ರೀಡಾ ಮತ್ತು ಸಾಂಸ್ಕೃತಿಕ ಮಹೋತ್ಸವದಲ್ಲಿ ಅಮೋಘ ಪ್ರದರ್ಶನ ನೀಡಲು ಭರ್ಜರಿ ಸಿದ್ಧತೆ ನಡೆಸುತ್ತಿದ್ದಾರೆ.

ಶಿಕ್ಷಣ ಕ್ಷೇತ್ರದಲ್ಲಿ ಮೌಲ್ಯಾಧಾರಿತ ಉಚಿತ ಶಿಕ್ಷಣ ನೀಡುವ ಮೂಲಕ ನಾಡಿನಾದ್ಯಂತ ಹೆಸರುವಾಸಿಯಾಗಿರುವ ಸತ್ಯ ಸಾಯಿ ಲೋಕ ಸೇವಾ ಗುರುಕುಲ ಸಮೂಹ ಶಿಕ್ಷಣ ಸಂಸ್ಥೆಗಳು, ಸರ್ ಎಂ. ವಿಶ್ವೇಶ್ವರಯ್ಯನವರ ಹುಟ್ಟೂರಾದ ಮುದ್ದೇನಹಳ್ಳಿಯಲ್ಲಿ ತನ್ನ ಮುಖ್ಯಕೇಂದ್ರವನ್ನು ಹೊಂದಿದ್ದು, ಪ್ರಸಕ್ತ ವರ್ಷ ಸುವರ್ಣ ಮಹೋತ್ಸವದ ಸಂಭ್ರಮದಲ್ಲಿದೆ. ಇದೇ ಜುಲೈ 5ರಂದು ನಡೆಯಲಿರುವ ಈ ಸುವರ್ಣ ಸಂಭ್ರಮದಲ್ಲಿ ಭಾರತ ಸೇರಿದಂತೆ ಜಗತ್ತಿನ ಅನೇಕ ದೇಶಗಳ ಸಾಂಸ್ಕೃತಿಕ, ಸಮರ ಮತ್ತು ಕ್ರೀಡಾ ವಿಷಯಾಧಾರಿತ ವೈವಿಧ್ಯಮಯ ಪ್ರದರ್ಶನಗಳು ಅನಾವರಣಗೊಳ್ಳಲಿವೆ.

### 108 ಅಡಿ ಎತ್ತರದಲ್ಲಿ ರೋಮಾಂಚಕ ಸಾಹಸ ಪ್ರದರ್ಶನ

ಈ ಭವ್ಯ ಮಹೋತ್ಸವದಲ್ಲಿ ಪಾಲ್ಗೊಳ್ಳುತ್ತಿರುವ ಮಂಡ್ಯದ ಶ್ರೀ ಸತ್ಯ ಸಾಯಿ ಶಾರದಾನಿಕೇತನಂ ಗುರುಕುಲದ ವಿದ್ಯಾರ್ಥಿಗಳು ಮೂರು ವಿಶಿಷ್ಟ ಹಾಗೂ ಮನೋಮೋಹಕ ಪ್ರದರ್ಶನಗಳನ್ನು ನೀಡಲಿದ್ದಾರೆ. ಇವುಗಳಲ್ಲಿ ಮೊದಲನೆಯದಾಗಿ 'ಸೆಲೆಸ್ಟಿಯಲ್ ರಿಥಮ್ಸ್' ಎಂಬ ಅತ್ಯಂತ ರೋಮಾಂಚಕಾರಿ ಸಾಹಸ ಪ್ರದರ್ಶನ ಪ್ರೇಕ್ಷಕರನ್ನು ಕಣ್ಣಿಕ್ಕದಂತೆ ಮಾಡಲಿದೆ. ಬೃಹತ್ ಕ್ರೇನ್ ಮೂಲಕ ಮೇಲೆತ್ತಿದ ಕಬ್ಬಿಣದ ಚೌಕಾಕೃತಿಯ ಚೌಕಟ್ಟಿನಲ್ಲಿ, ವಿದ್ಯಾರ್ಥಿಗಳು ಯಾವುದೇ ಸುರಕ್ಷಾ ಸಾಧನಗಳ ನೆರವಿಲ್ಲದೆ ಭೂಮಿಯಿಂದ ಸುಮಾರು 108 ಅಡಿ ಎತ್ತರದಲ್ಲಿ ನಡೆಸುವ ವಿಭಿನ್ನ ಸಾಮೂಹಿಕ ಕಲಾಕೃತಿಗಳ ರಚನೆ ಈ ಕಾರ್ಯಕ್ರಮದ ಪ್ರಮುಖ ಆಕರ್ಷಣೆಯಾಗಿದೆ.

### ಸಾಂಪ್ರದಾಯಿಕ 'ತಲ್ವಾರ್ ರಾಸ್' ಮತ್ತು ಮೂಕಾಭಿನಯ

ಇದರೊಂದಿಗೆ ಮಂಡ್ಯ ಮತ್ತು ಮೈಸೂರು ಸಾಯಿ ಗುರುಕುಲದ ಸುಮಾರು 100 ಬಾಲಕರು ಒಟ್ಟಾಗಿ ಗುಜರಾತ್ ರಾಜ್ಯದ ಸೌರಾಷ್ಟ್ರ ಪ್ರದೇಶದ ಸಾಂಪ್ರದಾಯಿಕ ಜಾನಪದ ನೃತ್ಯ ರೂಪವಾದ 'ತಲ್ವಾರ್ ರಾಸ್' ಪ್ರಸ್ತುತಪಡಿಸಲಿದ್ದಾರೆ. ರಜಪೂತ ವೀರತ್ವವನ್ನು ಗೌರವಿಸಲು ಮತ್ತು ವಿಜಯದಶಮಿಯ ಶಸ್ತ್ರಪೂಜೆಗೆ ಸಂಬಂಧಿಸಿದ ಈ ಯುದ್ಧಶೈಲಿಯ ನೃತ್ಯವನ್ನು ದುರ್ಗಾ ದೇವಿ ಅಥವಾ ಸ್ಥಳೀಯ ವೀರರನ್ನು ಸ್ತುತಿಸುವ ಜಾನಪದ ಸಂಗೀತದ ಹಿನ್ನೆಲೆಯಲ್ಲಿ ತೀಕ್ಷ್ಣ ಖಡ್ಗಗಳೊಂದಿಗೆ ಆಡಲಾಗುತ್ತದೆ. ಇನ್ನು ಸಾಯಂಕಾಲದ ಸಾಂಸ್ಕೃತಿಕ ಕಾರ್ಯಕ್ರಮದ ಭಾಗವಾಗಿ, ಸಾಯಿ ಕೃಷ್ಣನ್ ಪ್ರೇಮಾಮೃತಂ ಸಭಾಭವನದಲ್ಲಿ ಸುಮಾರು 5,000 ಪ್ರೇಕ್ಷಕರ ಸಮ್ಮುಖದಲ್ಲಿ 'ಸದ್ಗುರು – ನಮ್ಮ ಜೀವನದ ಭರವಸೆ' ಎಂಬ ಶೀರ್ಷಿಕೆಯ 40 ನಿಮಿಷಗಳ ವಿಶೇಷ ಮೂಕಾಭಿನಯ ನಡೆಯಲಿದ್ದು, ಸದ್ಗುರು ಶ್ರೀ ಮಧುಸೂದನ ಸಾಯಿ ಅವರ ಸಾಮಾಜಿಕ ಕೊಡುಗೆ ಹಾಗೂ ಸೇವೆಗಳನ್ನು ವಿದ್ಯಾರ್ಥಿಗಳು ಅಭಿನಯದ ಮೂಲಕ ಪರಿಚಯಿಸಲಿದ್ದಾರೆ.

### ಜಾಗತಿಕ ಮಟ್ಟದಲ್ಲಿ ನೇರ ಪ್ರಸಾರ

ಕರ್ನಾಟಕ, ತೆಲಂಗಾಣ, ತಮಿಳುನಾಡು ಸೇರಿದಂತೆ ದೇಶದ ವಿವಿಧ ರಾಜ್ಯಗಳ 28ಕ್ಕೂ ಹೆಚ್ಚು ಸಾಯಿ ವಿದ್ಯಾಸಂಸ್ಥೆಗಳ ಸುಮಾರು 4,000 ವಿದ್ಯಾರ್ಥಿ-ವಿದ್ಯಾರ್ಥಿನಿಯರು ಒಟ್ಟುಗೂಡಿ ನೀಡಲಿರುವ ಈ ಅಭೂತಪೂರ್ವ ಸಮಾರಂಭಕ್ಕೆ ಸಾಕ್ಷಿಯಾಗಲು ದೇಶ-ವಿದೇಶಗಳಿಂದ ಗಣ್ಯರು ಹಾಗೂ ಕಲಾರಸಿಕರು ಆಗಮಿಸಲಿದ್ದಾರೆ. ನೇರವಾಗಿ ಬರಲಾಗದ ಜಾಗತಿಕ ಭಕ್ತರು ಮತ್ತು ಸಾರ್ವಜನಿಕರಿಗಾಗಿ ಈ ಎಲ್ಲಾ ಮನೋರಂಜನಾ ಹಾಗೂ ಸಾಹಸಮಯ ಕಾರ್ಯಕ್ರಮಗಳನ್ನು 'ಶ್ರೀ ಮಧುಸೂದನ ಸಾಯಿ' ಅವರ ಅಧಿಕೃತ ಯೂಟ್ಯೂಬ್ ಚಾನೆಲ್ನಲ್ಲಿ ನೇರ ಪ್ರಸಾರ ಮಾಡಲು ಸುಸಜ್ಜಿತ ವ್ಯವಸ್ಥೆ ಕಲ್ಪಿಸಲಾಗಿದೆ.

# ರೋಟರಿ ಸಂಸ್ಥೆಯ ಮಾದರಿ ಅಧ್ಯಕ್ಷ ಕಾಗಲವಾಡಿ ಚಂದ್ರು

ಚಾಮರಾಜನಗರ, ಚಾಮರಾಜನಗರ ರೋಟರಿ ಸಂಸ್ಥೆ 2025–26ನೇ ಸಾಲಿನಲ್ಲಿ 310 ಕಾರ್ಯ ಕ್ರಮಗಳನ್ನು ಮಾಡುವ ಮೂಲಕ ಉತ್ತಮವಾಗಿ ಕಾರ್ಯನಿರ್ವಹಿಸಿದ್ದು, ಈ ಶ್ರೇಯಸ್ಸು ಅಧ್ಯಕ್ಷ




ಕಾಗಲವಾಡಿ ಚಂದ್ರು ಅವರಿಗೆ ಸಲ್ಲುತ್ತದೆ ಎಂದು ರೋಟರಿ ಸಂಸ್ಥೆಯ ಮಾಜಿ ಜಿಲ್ಲಾ ಗೌರರ್ ಡಾ .ನಾಗಾರ್ಜುನ್ ಹೇಳಿದರು.

ನಗರದ ರೋಟರಿ ಸಂಸ್ಥೆವತಿಯಿಂದ ಆಯೋಜಿಸಲಾದ ವಿಶೇಷ ಸಭೆಯಲ್ಲಿ ಮಾತನಾಡಿದರು. ಸುಮಾರು 13ರಿಂದ 15 ಲಕ್ಷ ವೆಚ್ಚದ ಕೃತಕ ಕೈ–ಕಾಲು ಜೋಡನಾ ಶಿಬಿರವನ್ನು ಏರ್ಪಡಿಸಿದ್ದು ಈ ಸಾಲಿನ ದೊಡ್ಡ ಕಾರ್ಯಕ್ರಮವಾಗಿದ್ದು ಎಲ್ಲರ ಸಹ ಕಾರದಿಂದ ಶಿಬಿರ ಯಶಸ್ವಿಯಾಗಿದೆ ಎಂದು ತಿಳಿಸಿ ದರು. ರೋಟರಿ ಸಂಸ್ಥಾಪಕ ಸದಸ್ಯರಾದ ಜಿ.ಆರ್. ಅಶ್ವಥ್ ನಾರಾಯಣ್, ಸಿ.ವಿ.ಶ್ರೀನಿವಾಸ ಶೆಟ್ಟಿ ಮಾತ ನಾಡಿದರು. ರೋಟರಿ ಸಂಸ್ಥೆ ಅಧ್ಯಕ್ಷ ಕಾಗಲವಾಡಿ ಚಂದ್ರು ಅಧ್ಯಕ್ಷತೆವಹಿಸಿದ್ದರು. ಸಭೆಯಲ್ಲಿ ರೋಟರಿ ಪದಾಧಿಕಾರಿಗಳು, ಸದಸ್ಯರು ಭಾಗವಹಿಸಿದ್ದರು.

# ಶಿಕ್ಷಣ ಇಲಾಖೆಯಿಂದಲೇ ಮೊಟ್ಟೆ ವಿತರಣೆ ಮಾಡುವಂತೆ ಮನವಿ



ಚಾಮರಾಜನಗರ, ಅಕ್ಷರ ದಾಸೋಹ ಯೋಜನೆಯ ಮಧ್ಯಾಹ್ನ ಬಿಸಿಯೂಟಕ್ಕೆ ಇಲಾಖೆಯಿಂದ ಆಹಾರ ಸಾಮಾಗ್ರಿಗಳು ಸರಬರಾಜು ಆಗುವ ರೀತಿ, ಮೊಟ್ಟೆ ವಿತರಣೆಯನ್ನು ಇಲಾಖೆಯಿಂದ ಅಥವಾ ಯಾವುದಾರು ಏಜೆನ್ಸಿಯಿಂದ ವಿತರಿಸಿ, ಮುಖ್ಯ ಶಿಕ್ಷಕರ ಒತ್ತಡ ಕಡಿಮೆಗೊಳಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದಿಂದ ಮನವಿ ಸಲ್ಲಿಸಲಾಯಿತು.

ನಗರದ ಜಿಲ್ಲಾಡಳಿತ ಭವನ ಮುಂಭಾಗ ಜಿಲ್ಲಾ ಸಂಘದ ಅಧ್ಯಕ್ಷ ಮಹದೇವಸ್ವಾಮಿ, ಪ್ರಧಾನ ಕಾರ್ಯದರ್ಶಿ ಕೆ.ಎಸ್.ಮಾದಪ್ಪ ನೇತೃತ್ವದಲ್ಲಿ ಸಮಾವೇಶ 'ಗೊಂಡ ಸಂಘದ ಪದಾಧಿಕಾರಿಗಳು ಹಾಗು ಮುಖ್ಯ ಶಿಕ್ಷಕರು, ಪ್ರಭಾರ ಮುಖ್ಯ ಶಿಕ್ಷಕರು ಕೆಲ ಕಾಲ ಮೌನ ಪ್ರತಿಭಟನೆ ನಡೆಸಿ, ಸ್ಥಳಕ್ಕಾಗಮಿಸಿ ಜಿ.ಪಂ. ಸಿಇಓ ಮೋನಾ ರೋತ್ ಅವರು ಮುಖಾಂತರ ಸರ್ಕಾರಕ್ಕೆ ಮನವಿ ಪತ್ರ ಸಲ್ಲಿಸಿದರು.

ಈ ಸಂದರ್ಭದಲ್ಲಿ ಸಂಘದ ಜಿಲ್ಲಾಧ್ಯಕ್ಷ ಮಹದೇವಸ್ವಾಮಿ ಮಾತನಾಡಿ, ರಾಜ್ಯದ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ, ಮಧ್ಯಾಹ್ನ ಬಿಸಿ. ಊಟ ಯೋಜನೆಯಡಿ ವಿದ್ಯಾರ್ಥಿಗಳಿಗೆ ಮೊಟ್ಟೆ ವಿತರಿಸಲಾಗುತ್ತಿದೆ. ಪ್ರಸ್ತುತ ದೈನಂದಿನ ಮಾರುಕಟ್ಟೆಯಲ್ಲಿ ಒಂದು ಮೊಟ್ಟೆಯ ಬೆಲೆ ಸುಮಾರು 8 ರೂ. ಇದ್ದು, ಸರ್ಕಾರ ಪ್ರತಿ ಮೊಟ್ಟೆಗೆ 5.20 ರೂ. ಮಾತ್ರ ಅನುದಾನ ನೀಡುತ್ತಿದೆ. ಇದರಿಂದ ಪ್ರತಿ ಮೊಟ್ಟೆಗೆ ಸುಮಾರು 2.80 ರೂ. ಹೆಚ್ಚುವರಿ ವೆಚ್ಚವಾಗುತ್ತಿದ್ದು, ಈ ಹೆಚ್ಚುವರಿ ಮೊತ್ತವನ್ನು ಶಾಲಾ ಮುಖ್ಯ ಶಿಕ್ಷಕರು ಮತ್ತು ಶಿಕ್ಷಕರು ಭರಿಸಬೇಕಾದ ಅನಿವಾರ್ಯತೆ ಇದೆ ಎಂದು ತಿಳಿಸಿದರು.

ಇಂತಹ ಪರಿಸ್ಥಿತಿಯಿಂದ ಮಧ್ಯಾಹ್ನ, ಬಿಸಿ ಊಟ ಯೋಜನೆಯ ಸಮರ್ಪಕ ನಿರ್ವಹಣೆ ಕಷ್ಟಸಾಧ್ಯವಾಗುತ್ತಿದೆ ಅಲ್ಲದೆ ಶಿಕ್ಷಕರಲ್ಲಿ ಆತಂಕ ಮತ್ತು ಅಸಮಾಧಾನಕ್ಕೆ ಕಾರಣವಾಗುತ್ತಿದೆ, ಶಾಲಾ ಶಿಕ್ಷಣದ ಜೊತೆಗೆ ಯೋಜನೆಯ ನಿರ್ವಹಣೆಯಲ್ಲಿಯೂ ಹೆಚ್ಚುವರಿ ಭಾರವನ್ನು ಹೊರುವ ಪರಿಸ್ಥಿತಿ ನಿರ್ಮಾಣವಾಗಿದೆ. ಇದು ಶಾಲಾ ಶೈಕ್ಷಣಿಕ ಪರಿಸ್ಥಿತಿಯ ಮೇಲೂ ಪರಿಣಾಮ ಬೀರುತ್ತಿದೆ .ಆದ್ದರಿಂದ ಬಿಸಿಯೂಟ ಯೋಜನೆಗೆ ಈಗಾಗಲೇ ಆಹಾರ ಸಾಮಾಗ್ರಿಗಳನ್ನು ಶಾಲೆಗೆ ಸರಬರಾಜು ಮಾಡುತ್ತಿರುವ ಹಾಗೆ, ಮೊಟ್ಟೆಯನ್ನು ಶಾಲೆಗಳಿಗೆ ಸರಬರಾಜು ಮಾಡಿಕೊಡಬೇಕಾಗಿ ಅಥವಾ ಯಾವುದಾರೂ ಏಜೆನ್ಸಿಗೆ ವಹಿಸಿ, ಮುಖ್ಯ ಶಿಕ್ಷಕರ ಒತ್ತಡ ಕಡಿಮೆಗೊಳಿಸಿ, ಬೋಧನೇತರ ಚಟುವಟಿಕೆಗಳಿಂದ ಶಿಕ್ಷಕರನ್ನು ಮುಕ್ತಗೊಳಿಸಿ, ಉತ್ತಮ ಶೈಕ್ಷಣಿಕ ಅವಕಾಶ ಕಲ್ಪಿಸಿ ಕೊಡಬೇಕು. ಅಲ್ಲಿಯವರೆಗೆ ಮೊಟ್ಟೆಯ ಮಾರುಕಟ್ಟೆ ದರದಂತೆ ಅನುದಾನ ಒದಗಿಸಿಕೊಡಲು ಕ್ರಮ ವಹಿಸಬೇಕು ಎಂದು ಒತ್ತಾಯಿಸಿದರು.

ಮನವಿ ಸ್ವೀಕರಿಸಿ ಪ್ರತಿಕ್ರಿಯಿಸಿದ ಸಿಇಓ ಅವರು ಜಿಲ್ಲಾ ಮಟ್ಟದ ಸಮಸ್ಯೆಯನ್ನು ಇಲ್ಲಿಯೇ ಬಗೆಹರಿಸಿಕೊಳ್ಳೋಣ. ರಾಜ್ಯ ಮಟ್ಟದ ಸಮಸ್ಯೆಗಳ ಮೇಲಾಧಿಕಾರಿಗಳಿಗೆ ತಿಳಿಸಿ, ಕ್ರಮ ವಹಿಸುವಂತೆ ನಾನು ಸಹ ನಿಮ್ಮೆಲ್ಲರ ಪರವಾಗಿ ಮನವಿ ಮಾಡಿಕೊಳ್ಳುತ್ತೇವೆ. ಮುಖ್ಯ ಶಿಕ್ಷಕರಿಗೆ ಆಗುತ್ತಿರುವ ತೊಂದರೆಯನ್ನು ತಪ್ಪಿಸಲು ಸದ್ಯದಲ್ಲಿಯೇ ಇಲಾಖೆಯ ಮುಖ್ಯಸ್ಥರ ಸಭೆ ನಡೆಸಿ, ಚರ್ಚಿಸುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ಬಿಸಿಯೂಟದ ಜಿಲ್ಲಾ ಅಧಿಕಾರಿ ರೇವಣ್ಣ, ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುಧಾ, ತಾಲೂಕು ಅಧ್ಯಕ್ಷರಾದ ಚಾ.ನಗರದ ಸಿ.ಕೆ. ರಾಮಸ್ವಾಮಿ, ಯಳಂದೂರು ಸೋಮಣ್ಣ, ಕಾರ್ಯದರ್ಶಿ ಮಲ್ಲಿಕಾರ್ಜುನ, ಮುಖ್ಯ ಶಿಕ್ಷಕರ ಸಂಘದ ಅಧ್ಯಕ್ಷ ಕೆ.ಬಿ.ಮಹದೇವಮೂರ್ತಿ, ಹಿರಿಯ ಉಪಾಧ್ಯಕ್ಷ ಎಂ.ಡಿ. ಮಹದೇವಯ್ಯ, ಕುಮಾರ್, ದಾಕ್ಷಾಯಿಣಿ , ಪದಾಧಿಕಾರಿಗಳಾದ ಸುಶೀಲಾ, ಶ್ವೇತಾ, ಕೃಷ್ಣಮೂರ್ತಿ, ನಟರಾಜು, ಧನಂಜಯ, ಪುಟ್ಟಸ್ವಾಮಿ ಮೊದಲಾದವರು ಹಾಜರಿದ್ದರು.

# ರಾಮನಗರದಲಿ ಎಸ್.ಐ.ಆರ್ ಪ್ರಕ್ರಿಯೆ

## ಕಲ್ಯಾಣ ಮಂಟಪದಲ್ಲಿ ಎನ್ಯುಮರೇಷನ್ ಫಾರಂ ವಿತರಣೆ

ರಾಮನಗರ: ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್ ಐಆರ್) ಪ್ರಕ್ರಿಯೆಗೆ ನಿಯೋಜನೆಯಾದ ಅಧಿಕಾರಿಗಳು ಮತ್ತು ಸಿಬ್ಬಂದಿ ಮನೆಮನೆಗೂ ತೆರಳಿ ನಮೂನೆ ಪ್ರತಿಗಳನ್ನು ವಿತರಿಸಬೇಕು. ಆದರೆ ರಾಮನಗರದಲ್ಲಿ 23ನೇ ವಾರ್ಡಿನ ಮತದಾರರಿಗೆ ಟಿಪ್ಪುನಗರದ ಕಲ್ಯಾಣ ಮಂಟಪದಲ್ಲಿ ನಮೂನೆಗಳನ್ನು ವಿತರಿಸಿದ ಘಟನೆ ನಡೆದಿದೆ.

ರಾಜಕೀಯ ಪಕ್ಷವೊಂದರ ಏಜೆಂಟ್‌ಗಳು ಬಿಎಲ್ ಒ ಅಧಿಕಾರಿಗಳಿಗೆ ಮನೆ ಮನೆಗೆ ತೆರಳಲು ಅವಕಾಶ ನೀಡಲಿಲ್ಲ ಎಂಬ ಆರೋಪಗಳು ಕೇಳಿ ಬಂದಿವೆ. ಟಿಪ್ಪುನಗರ ಬಡಾವಣೆಗೆ ಸೇರಿದ ಮತಗಟ್ಟೆ ಸಂಖ್ಯೆಗಳಾದ 90, 91, 92ರ ಮತದಾರರನ್ನು ಕಲ್ಯಾಣ ಮಂಟಪದಲ್ಲಿ ಸೇರಿಸಿದ್ದರು. ಮೂವರು ಬಿಎಲ್ ಒ ಅಧಿಕಾರಿಗಳು ಮತ್ತು ಸಹಾಯಕರನ್ನು ಅಲ್ಲಿಗೆ ಕರೆಸಿಕೊಂಡು ಈ ಏಜೆಂಟರು ಮತದಾರರ ಪೂರ್ವ ಮುದ್ರಿತ ವಿವರಗಳಿರುವ ಗಣತಿ ನಮೂನೆ (ಎನುಮರೇಷನ್ ಫಾರ್ಮ್)ಗಳನ್ನು ವಿತರಿಸಿ ಚುನಾವಣಾ ಆಯೋಗದ ನಿಯಮಗಳನ್ನು ಗಾಳಿಗೆ ತೂರಿದ್ದಾರೆ. ಹೀಗೆ ಫಾರಂ ವಿತರಿಸುತ್ತಿರುವ ವೀಡಿಯೋಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿವೆ. ಸದರಿ ವಿಡಿಯೋ ವೈರಲ್ ಆಗುತ್ತಿದ್ದಂತೆ ಎಚ್ಚೆತ್ತ ನಗರ ಉಸ್ತುವಾರಿ ಅಧಿಕಾರಿಯಾದ ನಗರಸಭೆ ಆಯುಕ್ತ ಜಯಣ್ಣರವರು ಕಲ್ಯಾಣ ಮಂಟಪಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ವೇಳೆಗಾಗಲೇ ಬಿಎಲ್ ಒ ಅಧಿಕಾರಿಗಳು ಕಲ್ಯಾಣ ಮಂಟಪ ಬಿಟ್ಟು ಮನೆ ಮನೆಗೆ ಭೇಟಿ ಕೊಟ್ಟು ಎನುಮರೇಷನ್ ಫಾರ್ಮ್ ಗಳನ್ನು ವಿತರಿಸುವ ಕಾರ್ಯದಲ್ಲಿ ತೊಡಗಿದ್ದರು.

### ಫಾರಂ ಸಿಗದಿದರೆ, ನಗರಸಭೆಯಲ್ಲಿರುವ ಸಲಾಹಾ ಕೇಂದ್ರ ಸಂಪರ್ಕಿಸಿ – ಡಾ.ಜಯಣ್ಣ

ಕಲ್ಯಾಣ ಮಂಟಪದಲ್ಲಿ ಜಮಾಯಿಸಿದ್ದ ಮತದಾರರನ್ನುದ್ದೇಶಿಸಿ ಮಾತನಾಡಿದ, ನಗರಸಭಾ ಆಯುಕ್ತ ಡಾ.ಜಯಣ್ಣ, ಬಿಎಲ್ ಒ ಅಧಿಕಾರಿಗಳು ಖುದ್ದಾಗಿ ಮನೆಗೆ ಬಂದು ಎನುಮರೇಷನ್ ಫಾರ್ಮ್ ಗಳನ್ನು ಕೊಡುತ್ತಾರೆ. ಇದಕ್ಕೆ ಒಂದು ತಿಂಗಳು ಕಾಲಾವಕಾಶ ಇದ್ದು, ಅರ್ಜಿಗಳು ಸಿಗದಿದ್ದರೆ ನಗರಸಭೆ ಆವರಣದಲ್ಲಿ ತೆರೆದಿರುವ ಸಲಹಾ ಕೇಂದ್ರದಲ್ಲಿ ಪಡೆದುಕೊಳ್ಳುವಂತೆ ಜಯಣ್ಣರವರು ತಿಳುವಳಿಕೆ ಹೇಳಿ ವಾಪಸ್ ಕಳುಹಿಸಿದರು. ಎಸ್ ಐಆರ್ ಪ್ರಕ್ರಿಯೆಗೆ ಯಾರೇ ಅಡ್ಡಿ ಪಡಿಸಿದರು ಅಂತಹರ ವಿರುದ್ಧ ದೂರು ದಾಖಲಿಸಲು ಜಿಲ್ಲಾ ಚುನಾವಣಾಧಿಕಾರಿಗಳು ಸ್ಪಷ್ಟ ನಿರ್ದೇಶನ ನೀಡಿದ್ದಾರೆ. ಕಲ್ಯಾಣ ಮಂಟಪದಲ್ಲಿ ಎಸ್ ಐಆರ್ ಪ್ರಕ್ರಿಯೆ ನಡೆಸಿರುವ ಕುರಿತು ವೈರಲ್ ಆಗಿರುವ ವಿಡಿಯೋ ಆಧರಿಸಿ ಜಿಲ್ಲಾ ಚುನಾವಣಾಧಿಕಾರಿಗಳಿಗೆ ವರದಿ ಸಲ್ಲಿಸುವುದಾಗಿ ನಗರ ಉಸ್ತುವಾರಿ ಅಧಿಕಾರಿ ಜಯಣ್ಣ ತಿಳಿಸಿದ್ದಾರೆ.



### ನಿಖಿಲ್ ಕುಮಾರಸ್ವಾಮಿ ಕಿಡಿ

ರಾಮನಗರ ವಿಧಾನಸಭಾ ಕ್ಷೇತ್ರದಲ್ಲಿ ನಡೆಯುತ್ತಿರುವ ವಿಶೇಷ ತೀವ್ರ ಪರಿಷ್ಕರಣೆ (ಎಸ್ ಐಆರ್) ಪ್ರಕ್ರಿಯೆಯಲ್ಲಿ ಲೋಪಗಳಾಗುತ್ತಿವೆ ಎಂದು ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಆಕ್ರೋಶ ವ್ಯಕ್ತಪಡಿಸಿದರು. ಈ ಕುರಿತು 'ಎಕ್ಸ್' ಖಾತೆಯಲ್ಲಿ ಟ್ವೀಟ್ ಮಾಡಿರುವ ಅವರು, ರಾಮನಗರದಲ್ಲಿ ಎಸ್ ಐಆರ್ ಪ್ರಕ್ರಿಯೆಗೆ ಕಪ್ಪುಚುಕ್ಕೆ. ಮನೆ–ಮನೆಗೆ ಹೋಗಿ ಗಣತಿ ನಮೂನೆ ವಿತರಿಸಬೇಕಾದ ಬಿಎಲ್ ಒ ಅಧಿಕಾರಿಗಳು, ರಾಮನಗರ ಟೌನ್ ನಗರಸಭೆಯ ವಾರ್ಡ್ ನಂ–23, ಟಿಪ್ಪು ನಗರದ ಕಲ್ಯಾಣ ಮಂಟಪದಲ್ಲಿ 'ಎಆರ್ ಜಾತ್ರೆ' ಮಾಡುತ್ತಿದ್ದಾರೆ. ಇದು ನಿಯಮಗಳನ್ನು ಗಾಳಿಗೆ ತೂರಿ, ಪ್ರಜಾಪ್ರಭುತ್ವಕ್ಕೆ ಮಾಡಿದ ಅಣಕ ಎಂದು ಕಿಡಿಕಾರಿದ್ದಾರೆ. ರಾಮನಗರದಲ್ಲಿ ಕಾನೂನು ಬಾಹಿರವಾಗಿ ನಡೆಯುತ್ತಿರುವ ಈ ಅಕ್ರಮಗಳ ವಿರುದ್ಧ ಕಣ್ಣುಮುಚ್ಚಿ ಕುಳಿತುಕೊಳ್ಳಬಾರದು. ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಿ, ಪ್ರಜಾಪ್ರಭುತ್ವವನ್ನು ಉಳಿಸಿ ಎಂದು ನಿಖಿಲ್ ಕುಮಾರಸ್ವಾಮಿ ಒತ್ತಾಯಿಸಿದ್ದಾರೆ.

# ಹಳಕಟ್ಟಿಯಿಂದ ನಿರಂತರ ಜಾಗೃತಿ

## ರಾಮನಗರದಲ್ಲಿ ವಚನ ಪಿತಾಮಹ ಜಯಂತ್ಯುತ್ಸವ

ರಾಮನಗರ: ಪತ್ರಕರ್ತರಾಗಿದ್ದ ಡಾ. ಫ.ಗು. ಹಳಕಟ್ಟಿ ಅವರು ಕನ್ನಡ ನಾಡು, ನುಡಿ ಮತ್ತು ಸಂಸ್ಕೃತಿಯ ಬಗ್ಗೆ ಅಪಾರವಾದ ಅಭಿಮಾನ ಹೊಂದಿದ್ದರು. ಕನ್ನಡಿಗರಲ್ಲಿ ಭಾಷಾಭಿಮಾನ ಹಾಗೂ ಭಾವೈಕ್ಯತೆಯ ಜಾಗೃತಿಯನ್ನು ಮೂಡಿಸಲು ಅವರು ತಮ್ಮ ಪತ್ರಿಕೆಗಳ ಮೂಲಕ ನಿರಂತರವಾಗಿ ಲೇಖನಗಳನ್ನು ಪ್ರಕಟಿಸುತ್ತಿದ್ದರು ಎಂದು ಜಾನಪದ ಲೋಕದ ಕ್ಯೂರೇಟರ್ ಡಾ. ಯು.ಎಂ. ರವಿ ತಿಳಿಸಿದರು. ನಗರದ ಕಂದಾಯ ಭವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಹಮ್ಮಿಕೊಳ್ಳಲಾಗಿದ್ದ 'ಡಾ. ಫ.ಗು. ಹಳಕಟ್ಟಿಯವರ ಜನ್ಮದಿನ ಹಾಗೂ ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆ' ಕಾರ್ಯಕ್ರಮದಲ್ಲಿ ಅವರು ಪ್ರಧಾನ ಭಾಷಣ ಮಾಡಿದರು.

ಇದೇ ವೇಳೆ ಮಾತನಾಡಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ. ಕೆ. ಸತೀಶ್, ಹಳಕಟ್ಟಿಯವರ ಆದರ್ಶದ ಹಾದಿಯಲ್ಲಿ ಇಲಾಖೆಯು ಗ್ರಾಮೀಣ ಹಾಗೂ ಜಾನಪದ ಕ್ಷೇತ್ರದ ಸಾಧಕರು, ಕಲಾವಿದರು ಮತ್ತು ಗಾಯಕರ ಜೀವನ ಚರಿತ್ರೆಯನ್ನು ದಾಖಲಿಸಿ ಪುಸ್ತಕ ರೂಪದಲ್ಲಿ ಪ್ರಕಟಿಸುವ ಮಹತ್ವದ ಯೋಜನೆಯನ್ನು ಕೈಗೆತ್ತಿಕೊಳ್ಳಲಿದೆ ಎಂದು ಪ್ರಕಟಿಸಿದರು. ವಚನಗಳ ಸಂದೇಶವನ್ನು ಜೀವನದಲ್ಲಿ ಅಳವಡಿಸಿಕೊಂಡು ಸಮಾಜ ಸೇವೆಗೆ ಪ್ರತಿಯೊಬ್ಬರೂ ಮುಂದಾಗಬೇಕು ಎಂದು ಅವರು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳ ಸಾಧಕ ಕಲಾವಿದರಿಗೆ ಅಧಿಕೃತ ಗುರುತಿನ ಚೀಟಿಗಳನ್ನು ವಿತರಿಸಿ ಗೌರವಿಸಲಾಯಿತು. ವೇದಿಕೆಯಲ್ಲಿ ಆರೋಗ್ಯ ಇಲಾಖೆಯ ಅಧಿಕಾರಿ ಡಾ. ಕುಮಾರ್, ಪಶುಪಾಲನಾ ಇಲಾಖೆಯ ಅಧಿಕಾರಿ ರುಕ್ಮಿಣಿ ಸೇರಿದಂತೆ ವಿವಿಧ ಇಲಾಖೆಗಳ ಪ್ರಮುಖರು ಹಾಗೂ ಸಮುದಾಯದ ಮುಖಂಡರು ಉಪಸ್ಥಿತರಿದ್ದರು.




### ವಚನ ಸಾಹಿತ್ಯಕ್ಕೆ ಬದುಕನ್ನೇ ಮುಡುಪಾಗಿಟ್ಟ ಮಹಾತ್ಮ

ಹಳಕಟ್ಟಿಯವರು ಅತ್ಯಂತ ಸರಳ ಕನ್ನಡದಲ್ಲಿ ಜನಸಾಮಾನ್ಯರಿಗೆ ಜ್ಞಾನ, ನೀತಿ ಮತ್ತು ಸಮಾನತೆಯ ಸಂದೇಶಗಳನ್ನು ತಲುಪಿಸಿದರು. ಜಾತಿ, ಮತ, ಲಿಂಗಭೇದದಂತಹ ಸಾಮಾಜಿಕ ಅನಿಷ್ಟಗಳನ್ನು ತೊರೆದು, 'ಮಾನವ ಜನ್ಮ ಒಂದೇ' ಎಂಬ ಶರಣರ ತತ್ವದಂತೆ ಬದುಕಬೇಕೆಂದು ವಚನಗಳ ಮೂಲಕ ಬೋಧಿಸಿದರು. ವಚನ ಸಾಹಿತ್ಯದ ಇತಿಹಾಸದಲ್ಲೇ ಲಭ್ಯವಿದ್ದ ಸುಮಾರು 24 ಸಾವಿರ ವಚನಗಳಲ್ಲಿ 10 ಸಾವಿರಕ್ಕೂ ಹೆಚ್ಚು ವಚನಗಳನ್ನು ವೈಯಕ್ತಿಕ ಶ್ರಮದಿಂದ ಸಂಗ್ರಹಿಸಿದ ಏಕೈಕ ಮಹಾವ್ಯಕ್ತಿ ಇವರಾಗಿದ್ದಾರೆ. ಉತ್ತರ ಕರ್ನಾಟಕ, ಆಂಧ್ರಪ್ರದೇಶ ಹಾಗೂ ಮಹಾರಾಷ್ಟ್ರದ ವಿವಿಧ ಭಾಗಗಳಿಗೆ ಭೇಟಿ ನೀಡಿ, ಮನೆಮನೆಗಳಿಂದ ತಾಳೆಗರಿಗಳನ್ನು ರಕ್ಷಿಸಿದರು. ಶಿಕ್ಷಣ, ವಕೀಲ ವೃತ್ತಿ ಹಾಗೂ ರಾಜಕೀಯದಲ್ಲಿ ಉಜ್ವಲ ಅವಕಾಶಗಳಿದ್ದರೂ, ಅವೆಲ್ಲವನ್ನೂ ತ್ಯಜಿಸಿ ವಚನ ಸಾಹಿತ್ಯದ ಉದ್ಧಾರಕ್ಕಾಗಿ ತಮ್ಮ ಇಡೀ ಬದುಕನ್ನು ಸಮರ್ಪಿಸಿಕೊಂಡರು ಎಂದು ಡಾ. ರವಿ ಸ್ಮರಿಸಿದರು.

### ಬಹುಮುಖಿ ಸಾಧನೆ ಹಾಗೂ ಇಲಾಖೆಯ ಹೊಸ ಯೋಜನೆ

ವಚನ ಸಾಹಿತ್ಯದ ಜೊತೆಗೆ ಜನಪದ ಪರಂಪರೆಯ ಸಂರಕ್ಷಣೆಯಲ್ಲೂ ತೊಡಗಿದ್ದ ಹಳಕಟ್ಟಿಯವರು, ಶೂನ್ಯ ಸಂಪಾದನೆ, ಶಿವಾನುಭವ, ಕೃಷಿ ವಿಜ್ಞಾನ ಸೇರಿದಂತೆ ಹತ್ತಾರು ಅಮೂಲ್ಯ ಕೃತಿಗಳನ್ನು ರಚಿಸಿದರು. 1912ರಲ್ಲಿ ವಿಜಯಪುರದಲ್ಲಿ ಶ್ರೀ ಸಿದ್ದೇಶ್ವರ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್ ಸ್ಥಾಪಿಸುವ ಮೂಲಕ ಸಹಕಾರಿ ರಂಗಕ್ಕೂ ಮುನ್ನುಡಿ ಬರೆದರು. ಅವರ ಸಮಾಜಸೇವೆಯನ್ನು ಗುರುತಿಸಿ ಅಂದಿನ ಮುಂಬೈ ಸರ್ಕಾರ 1920ರಲ್ಲಿ ವಿಧಾನ ಪರಿಷತ್ ಸದಸ್ಯರನ್ನಾಗಿ ನೇಮಿಸಿತ್ತು ಹಾಗೂ ಕರ್ನಾಟಕ ವಿಶ್ವವಿದ್ಯಾಲಯವು ಗೌರವ ಡಾಕ್ಟರೇಟ್ ನೀಡಿ ಗೌರವಿಸಿತ್ತು.

# ಶಾರದ ಕಾಲೇಜಿನಲ್ಲಿ ಎರಡು ದಿನಗಳ ಕಾರ್ಯಾಗಾರ



ಮೈಸೂರು: ಶಾರದಾ ವಿಲಾಸ ಕಾಲೇಜ್ ಆಫ್ ಫಾರ್ಮಸಿ ವತಿಯಿಂದ ಕೋರ್ ಕೆಮಿಕಲ್ ಅಂಡ್ ರಿಸರ್ಚ್ ಕಾಂಪಿಟನ್ಸಿ ಎಂಬ ವಿಷಯದ ಮೇಲೆ ಎರಡು ದಿನಗಳ ಕಾರ್ಯಾಗಾರವನ್ನು ನಡೆಸಲಾಯಿತು.

ಕಾರ್ಯಕ್ರಮವನ್ನು ಫಾರೂಕ್ ಮೆಡಿಕಲ್ ಕಾಲೇಜ್ ಪ್ರಾಧ್ಯಾಪಕ ಮತ್ತು ಮುಖ್ಯಸ್ಥ ಡಾ.ಮೃತ್ಯುಂಜಯ ಉದ್ಘಾಟಿಸಿದರು. ಬಳಿಕ ಮಾತನಾಡಿ, ಭಾರತದಲ್ಲಿ ಔಷಧಗಳ ಸಂಶೋಧನೆ ಬರದಿಂದ ಸಾಗುತ್ತಿದ್ದು ಹಲವಾರು ರೋಗಗಳಿಗೆ ಔಷಧಗಳನ್ನು ಕಂಡುಹಿಡಿಯುವುದು ಇನ್ನು ಸಾಧ್ಯವಾಗುತ್ತಿಲ್ಲ. ಇದಕ್ಕೆ ಕಾರಣ ಸಂಶೋಧನೆಗೆ ಅನುಕೂಲವಾಗುವಂತ ತರಬೇತಿ ಸುಮಾರು ವಿದ್ಯಾರ್ಥಿಗಳಿಗೆ ಸಿಗುತ್ತಿಲ್ಲ. ಹಾಗಾಗಿ ವಿದ್ಯಾರ್ಥಿ ದಿಸೆಯಲ್ಲೇ ಪ್ರಮುಖವಾಗಿ ಔಷಧ ವಿಜ್ಞಾನ ಮತ್ತು ವೈದ್ಯಕೀಯ ವಿದ್ಯಾರ್ಥಿಗಳಿಗೆ ತರಬೇತಿಗಳನ್ನು ನೀಡಬೇಕು ಮತ್ತು ಅವರು ಸಂಶೋಧನಾತ್ಮಕ ಕಾರ್ಯಗಳನ್ನು ಕಾಲೇಜು ಸ್ಥಳದಲ್ಲಿಯೇ ಕೈಗೊಳ್ಳುವಂತೆ ಉತ್ತೇಜನ ನೀಡಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆವಹಿಸಿದ ಪ್ರಾಂಶುಪಾಲ ಡಾ. ಹನುಮಂತಚಾರ್ ಜೋಶಿ ಮಾತನಾಡಿ, ಔಷಧಗಳ ಬಗೆಗಿನ ಸಂಶೋಧನೆ ಕೇವಲ ಆಸ್ಪತ್ರೆಗಳಲ್ಲಿ ನಡೆಯುವ ಸಂಶೋಧನೆಗೆ ಮಾತ್ರ ಸೀಮಿತವಾಗದೆ ಅವುಗಳ ಅಡ್ಡ ಪರಿಣಾಮಗಳು ಮತ್ತು ಬೇರೆ ಔಷಧಿಗಳೊಂದಿಗೆ ಆಗುವ ಇಂಟರಾಕ್ಷನ್ಸ್ ಸಹ ಬೇರೆಯ ರೋಗಗಳು ಬರಲು ಕಾರಣವಾಗಬಲ್ಲವಾಗಿದೆ. ಆದ್ದರಿಂದ ಔಷದ ವಿಜ್ಞಾನ ವಿದ್ಯಾರ್ಥಿಗಳು ಈ ವಿಷಯದ ಬಗ್ಗೆ ಸರಿಯಾದ ಅಧ್ಯಯನ ಮಾಡುವುದು ಅವಶ್ಯಕತೆವಾಗಿದೆ ಎಂದು ತಿಳಿಸಿದರು. ಫಾರ್ಮಸಿ ಪ್ರಾಕ್ಟೀಸ್ ವಿಭಾಗದ ಮುಖ್ಯಸ್ಥ ಡಾ.ಉಮೇಶ್ ಇನ್ನಿತರರು ಭಾಗವಹಿಸಿದ್ದರು. ಕಾರ್ಯಕ್ರಮದ ತರಬೇತುದಾರರಾದ ಬಂದಿದ್ದ ಡಾ.ಕಾರ್ತಿಕ್ ರಖಂ ಎರಡು ದಿನಗಳ ತರಬೇತಿಯನ್ನು ನೀಡಲಿದ್ದಾರೆ.

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

ಟ್ರಾವಲ್ಸ್ ಅಸೋಸಿಯೇಶನ್

# ನೂತನ ಪದಾಧಿಕಾರಿಗಳ ಆಯ್ಕೆ




ಮೈಸೂರು: ನಗರದ ಟ್ರಾವಲ್ಸ್ ಅಸೋಸಿಯೇಶನ್‌ನ 2026–28ನೇ ಅವಧಿಗೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಸಿ.ಎ.ಜಯಕುಮಾರ್ ನೇತೃತ್ವದ ನೂತನ ತಂಡ ಆಯ್ಕೆಯಾಯಿತು.

ಈ ಸಂಬಂಧ ಮೈಸೂರು ಟ್ರಾವಲ್ಸ್ ಅಸೋಸಿಯೇಶನ್‌ನ 2025–26ನೇ ಸಾಲಿನ ವಾರ್ಷಿಕ ಮಹಾಸಭೆ ನಡೆಯಿತು. 2026–28ನೇ ಅವಧಿಗೆ ನಡೆದ ಚುನಾವಣೆಯಲ್ಲಿ ನೂತನ ಪದಾಧಿಕಾರಿಗಳು ಅವಿರೋಧವಾಗಿ ಆಯ್ಕೆಯಾದರು. ಅಧ್ಯಕ್ಷರಾಗಿ ಸಿ.ಎ.ಜಯಕುಮಾರ್, ಉಪಾಧ್ಯಕ್ಷರಾಗಿ ಸಮರ್ಥ್ ವೈದ್ಯ, ಕಾರ್ಯದರ್ಶಿಯಾಗಿ ಅಭಿನಂದನ್ ಸಾಲಿಗ್ರಾಮ, ಖಜಾಂಚಿಯಾಗಿ ಅರುಣ್ ಕುಮಾರ್, ಜಂಟಿ ಕಾರ್ಯದರ್ಶಿಯಾಗಿ ಬಿ.ಪಿ.ಪ್ರಜ್ವಲ್ ಹಾಗೂ ಜನಸಂಪರ್ಕ ಅಧಿಕಾರಿಯಾಗಿ ಎಸ್.ಜೆ.ಅಶೋಕ್ ಆಯ್ಕೆಗೊಂಡರು. ಸಾಂಸ್ಕೃತಿಕ ಮತ್ತು ಕಾರ್ಯಕಾರಿ ಸಮಿತಿ ಸದಸ್ಯರಾಗಿ ಎ.ಸಿ.ರವಿ, ವಿನೋದ್, ರಾಘವೇಂದ್ರ, ಚಂದ್ರು ಗೌಡ, ರವೀಂದ್ರ ಕುಮಾರ್, ಪುನೀತ್ ಕುಮಾರ್ ಜೈನ್ ಆಯ್ಕೆಗೊಂಡರು. ನೂತನ ಪದಾಧಿಕಾರಿಗಳಿಗೆ ನಿಕಟಪೂರ್ವ ಅಧ್ಯಕ್ಷ ಪ್ರಶಾಂತ್ ಇನ್ನಿತರರು ಅಭಿನಂದಿಸಿದರು.

# ಜೆಎಸ್‌ಎಸ್ ಕಾಲೇಜಿನಲ್ಲಿ ಜಾಗೃತಿ




ಚಾಮರಾಜನಗರ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಸ್ವೀಪ್ ಸಮಿತಿ ವತಿಯಿಂದ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್.ಐ.ಆರ್) ಕುರಿತು ವಿಶೇಷ ಜಾಗೃತಿ ಕಾರ್ಯಕ್ರಮ ನಗರದ ಜೆ.ಎಸ್.ಎಸ್ ಮಹಿಳಾ ಪದವಿ ಪೂರ್ವ ಕಾಲೇಜಿನಲ್ಲಿ ಕೈಗೊಳ್ಳಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾ ಪಂಚಾಯತ್ ಸಹಾಯಕ ಕಾರ್ಯದರ್ಶಿ ಶ್ರೀಕಂಠೇರಾಜೇ ಅರಸ್ ಅವರು ಬೂತ್ ಮಟ್ಟದ ಅಧಿಕಾರಿಗಳು ಮನೆ ಮನೆಗೆ ಭೇಟಿ ನೀಡಿ ಎನ್ಯುಮರೇಷನ್ ಫಾರಂ ವಿತರಿಸಲಿದ್ದಾರೆ. ಇದನ್ನು ಭರ್ತಿ ಮಾಡಿ ನೀಡುವ ಮೂಲಕ ಸಂಪೂರ್ಣ ಸಹಕಾರ ನೀಡಬೇಕು ಎಂದರು. ವಿಶೇಷ ಸಮಗ್ರ ಪರಿಷ್ಕರಣೆಯ ಉದ್ದೇಶವು ಎಲ್ಲಾ ಅರ್ಹ ನಾಗರಿಕರನ್ನು ಮತದಾರರ ಪಟ್ಟಿಯಲ್ಲಿ ಸೇರ್ಪಡೆಗೊಳಿಸುವುದಾಗಿದೆ. ಈ ವಿಶೇಷ ಪರಿಷ್ಕರಣೆ ಅವಧಿಯಲ್ಲಿ ಮತದಾರರ ಹೆಸರು ಪಟ್ಟಿಯಲ್ಲಿ ಇರುವುದನ್ನು ಪರಿಶೀಲಿಸಿ ಹಾಗೂ ಖಾತರಿಪಡಿಸಿಕೊಳ್ಳಬೇಕು ಎಂದು ಶ್ರೀಕಂಠರಾಜೇ ಅರಸ್ ಅವರು ತಿಳಿಸಿದರು.

ಕಾರ್ಯಕ್ರಮದಲ್ಲಿ ಜೆ.ಎಸ್.ಎಸ್ ಮಹಿಳಾ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರು, ಉಪನ್ಯಾಸಕರು, ಇತರರು ಇದ್ದರು.

ಮಾರ್ಗದರ್ಶಿ ಸಂಸ್ಥೆಯ ಜಂಟಿ ಕಾರ್ಯದರ್ಶಿ ಕೆ.ಎಂ.ಗೀತಾಮೃತ ಹೇಳಿಕೆ

# ವಿಕಲಚೇತನರ ಪುನಶ್ಚೇತನಕ್ಕೆ ಮಾರ್ಗದರ್ಶಿ ಸಂಸ್ಥೆ ಮಾದರಿಯಾಗಿದೆ



ಚಾಮರಾಜನಗರ, ವಿಕಲಚೇತನರ ಪುನಶ್ಚೇತನ ಕಾರ್ಯದಲ್ಲಿ ಮಾರ್ಗದರ್ಶಿ ಸಂಸ್ಥೆ ಸಕ್ರೀಯವಾಗಿ ತೊಡಗಿಸಿಕೊಂಡಿದೆ ಎಂದು ಮಾರ್ಗದರ್ಶಿ ಸಂಸ್ಥೆಯ ಜಂಟಿ ಕಾರ್ಯದರ್ಶಿ ಕೆ.ಎಂ.ಗೀತಾಮೃತ ಹೇಳಿದರು.

ನಗರದ ಫಾರೆಸ್ಟ್ ನರ್ಸರಿ ಸಮೀಪ ವಿಕಲಚೇತನ ಮಕ್ಕಳಿಗಾಗಿ ಆರಂಭಿಕ ಚಿಕಿತ್ಸಾ ಕೇಂದ್ರದ ಲೋಕಾರ್ಪಣೆ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು. ಸಂಸ್ಥೆ ಆರಂಭದ ದಿನಗಳಿಂದಲೂ ವಿಕಲಚೇತನರಿಗೆ ಊರುಗೋಲಾಗಿ ನಿಂತಿದ್ದು ಹಲವಾರು ಕಾರ್ಯಕ್ರಮಗಳನ್ನು ನಡೆಸುವ ಮೂಲಕ ಸಮಾಜದ ಮುಖ್ಯವಾಹಿನಿ ಗೆ ತರುವ ಪ್ರಯತ್ನ ಮಾಡಿದೆ ಎಂದು ತಿಳಿಸಿದರು.

ಅಂಗವೈಪಲ್ಯ ಇರುವವರು ನನ್ನ ಕೈಯಲ್ಲಿ ಏನು ಸಾಧಿಸಲು ಸಾಧ್ಯವಿಲ್ಲ ಎಂಬ ಭಾವನೆಬರಬಾರದು. ಪಿಜಿಯೋಥೆರೆಪಿಯಲ್ಲಿ ಸ್ವಲ್ಪ ಮಟ್ಟಿಗಾದರು ಗುಣಪಡಿಸಬಹುದು ಎಂದು ಹೇಳಿದರು.

ವಿಕಲಚೇತನ ಮಕ್ಕಳಿಗೆ ಆಟಗಳನ್ನು ಮತ್ತು ವ್ಯಾಯಾಮ ಮಾಡುವುದನ್ನು ಕಲಿಸಲಾಗುವುದು ಹಾಗೂ ಜನಗಳ ಜೊತೆ ಬೆರೆತು ಮಾತನಾಡುವುದನ್ನು ಕಲಿಸಲಾಗುವುದು ಎಂದು ತಿಳಿಸಿದರು.

ಸಂಸ್ಥೆಯ ಅಧ್ಯಕ್ಷೆ ವಿ.ವಿ.ಶಾಂತಲಕ್ಷ್ಮಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ ಸಂಸ್ಥೆಗಳನ್ನು ನಡೆಸುವುದು ಸುಲಭದ ಮಾತಲ್ಲ ಹಾಗಾಗಿ ದಾನಿಗಳ ನೆರವುಬೇಕಾಗುತ್ತದೆ ಎಂದು ತಿಳಿಸಿದರು. ಜಿಲ್ಲೆಯ 5 ತಾಲ್ಲೂಕುಗಳಲ್ಲಿ ಬಡ ಕುಟುಂಬಗಳನ್ನು ಗುರುತಿಸಿ ಹಸು ಮತ್ತು ಕರುಗಳನ್ನು ದಾನವಾಗಿ ನೀಡಲಾಗಿದೆ. ಇದುವರೆಗೆ ಜಿಲ್ಲೆಯ. 97 ಕುಟುಂಬಗಳಿಗೆ ನೆರವು ನೀಡಲಾಗಿದೆ. ಬಡಕುಟುಂಬದ ವಿಕಲಚೇತನ ಮಕ್ಕಳಿಗೆ ಪಿಜಿಯೋಥೆರೆಪಿ ಚಿಕಿತ್ಸೆ ಕೊಡಿಸಲು ನೆರವು ನೀಡಲಾಗಿದೆ ಎಂದರು.

ಸಂಸ್ಥೆಯ ಪ್ರಾಜೆಕ್ಟ್ ಡೈರೆಕ್ಟರ್ ಕೆ. ವಿ. ರಾಜಣ್ಣ ಪ್ರಸ್ತಾವಿಕವಾಗಿ ಮಾತನಾಡಿ ಮಾರ್ಗದರ್ಶಿ ಸಂಸ್ಥೆಯನ್ನು ಜಿಲ್ಲೆಯ ಇನ್ನು 4 ತಾಲ್ಲೂಕು ಕೇಂದ್ರಗಳಿಗೆ ವಿಸ್ತರಿಸುವ ಪ್ರಯತ್ನಗಳು ನಡೆಯುತ್ತಿದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಆಡಳಿತ ಮಂಡಳಿ ಸದಸ್ಯರು ಚಲಂ, ಸಂಸ್ಥಾಪಕ ಸದಸ್ಯರು ಎಚ್. ಜಿ. ಹೆಗಡೆ, ಆಡಳಿತ ಮಂಡಳಿ ಸದಸ್ಯರು ಮಮತಾ, ವಿಕಲಚೇತನ ಅಭಿವೃದ್ದಿ ಶ್ರಮಿಸುತ್ತಿರುವ ಬೆಂಗಳೂರಿನ ಪದ್ಮನಾಭ, ಸುಮಾ ರಾವ್, ರಜನಿ ರಾಮ್ ಕುಮಾರ್, ಅಶ್ವಿನಿ ಹಾಗೂ ವಿಶೇಷ ಅತಿಥಿಗಳಾಗಿ ಪದ್ಮಾವತಿ, ಸುಬ್ಬಲಕ್ಷ್ಮಿ, ವಿಜಯಲಕ್ಷ್ಮಿ, ಸ್ವಯಂಸೇವಕರಾದ ವಿವೇಕ್, ನಾಗಭೂಷಣ್, ಪ್ರೋಗ್ರಾಂ ಮ್ಯಾನೇಜರ್ ಅಭಿಷೇಕ್ ಎ.ಸಿ, ಹಿರಿಯ ಫಿಸಿಯೋಥೆರಪಿಸ್ಟ್ ಶ್ರೀನಿವಾಸ್ ಎನ್. ಕಿರಿಯ ಥೆರಪಿಸ್ಟ್ ರಾಜು ಎಂ. ಮಾರ್ಗದರ್ಶಿ ಸಂಸ್ಥೆಯ ಸಿಬ್ಬಂದಿ ವರ್ಗದವರು ಹಾಜರಿದ್ದರು.

# ಕೆ.ಆರ್.ನಗರ ಪತ್ರಕರ್ತರ ಸಂಘದ ಪದಗ್ರಹಣ



ಮೈಸೂರು: ಕೆ.ಆರ್.ನಗರ ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷರಾಗಿ ಪಂಡಿತ್ ನಾಟಿಕರ್ ಮತ್ತು ಪ್ರಧಾನ ಕಾರ್ಯದರ್ಶಿಯಾಗಿ ನಾಗೇಗೌಡ ನೇತೃ ತ್ವದ ತಂಡ ಅವಿರೋಧವಾಗಿ ಆಯ್ಕೆ ಯಾಗಿದ್ದು ನೂತನ ಆಡಳಿತ ಮಂಡಳಿ ಅಸ್ಥಿತ್ವಕ್ಕೆ ಬಂದಿದೆ.

ನಗರದ ಪತ್ರಕರ್ತರ ಭವನದಲ್ಲಿ ನಡೆದ ಸಮಾರಂಭದಲ್ಲಿ ನೂತನವಾಗಿ ಆಯ್ಕೆಯಾದ ಪದಾಧಿಕಾರಿಗಳು ಮತ್ತು ಕಾರ್ಯ ಕಾರಿಣಿ ಸದಸ್ಯರಿಗೆ ಚುನಾವಣಾಧಿಕಾರಿ ಎಂ.ಎಸ್.ಕಾಶಿನಾಥ್ ಪ್ರಮಾಣ ಪತ್ರ ವಿತರಿಸಿದರು. ಸಂಘದ ಗ್ರಾಮಾಂತರ ಉಪಾಧ್ಯಕ್ಷರಾಗಿ ಮಧುಸೂದನ್ ಸಿ.ಜೆ. ಗ್ರಾಮಾಂತರ ಕಾರ್ಯದರ್ಶಿಯಾಗಿ ಸಿ.ಸಿ.ಮಹದೇವ್ ಹಾಗೂ ಖಜಾಂಚಿಯಾಗಿ ಎಸ್. ಯೋಗಾನಂದ್ ಪ್ರಮಾಣ ಪತ್ರ ಪಡೆದರು.

ಕಾರ್ಯಕಾರಿಣಿ ಸದಸ್ಯರಾಗಿ ಜಿ.ಕೆ.ನಾಗಣ್ಣ, ಕೆ.ಆರ್.ಶ್ರೀನಿವಾಸ್, ಎ.ಚೈತನ್ಯ, ರಾಮಕೃಷ್ಣೇಗೌಡ, ಮಹಮ್ಮದ್ ಸಬೀರ್ ಖಾನ್, ಎಂ.ಎಸ್.ರವಿಕುಮಾರ್ ಹಾಗೂ ಎಚ್.ಎಲ್. ಆನಂದ್ ಅವರಿಗೂ ಪ್ರಮಾಣ ಪತ್ರ ವಿತರಿಸಲಾಯಿತು.

ಪದಗ್ರಹಣ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್, ಆಸ್ತಿ ಮಾಡುವ ಕನಸ್ಸಿಟ್ಟುಕೊಂಡು ಸಂಘಕ್ಕೆ ಬರಬೇಡಿ, ಸಂಘವನ್ನೇ ನಮ್ಮ ಆಸ್ತಿ ಎಂದು ಭಾವಿಸಿ ಅದರ ರಕ್ಷಣೆ ಮತ್ತು ಪತ್ರಕರ್ತರ ಕ್ಷೇಮಾಭಿವೃದ್ಧಿಗೆ ನಿಸ್ವಾರ್ಥವಾಗಿ ಸೇವೆ ಸಲ್ಲಿಸುವ ಮನಸ್ಸಿದ್ದರೆ ಮಾತ್ರ ಸಂಘಕ್ಕೆ ಬರಬೇಕು ಎಂದು ತಿಳಿಸಿದರು.

ರಾಜ್ಯದಲ್ಲಿಯೇ ಮಾದರಿ ಸಂಘ ಎನಿಸಿಕೊಂಡಿರುವ ಪತ್ರಕರ್ತರ ಸಂಘ ಕೆಳೆದ 90 ವರ್ಷಗಳಿಂದ ಹಿರಿಯರ ಪರಿಶ್ರಮ ಮತ್ತು ಮಾರ್ಗದರ್ಶನಲ್ಲಿ ಮುನ್ನಡೆದುಕೊಂಡು ಬಂದಿದೆ. ಪತ್ರಕರ್ತರು ಸಂಘದ ಚೌಕಟ್ಟಿ ನಲ್ಲಿ ಒಗ್ಗಟ್ಟಿನಲ್ಲಿದ್ದರೆ ನಮ್ಮ ಮೇಲೆ ನಡೆ ಯಬಹುದಾದ ದೌರ್ಜನ್ಯ ಮತ್ತು ಅನ್ಯಾ ಯದ ವಿರುದ್ಧ ಹೋರಾಟ ನಡೆಸಬ ಹುದು. ಮತ್ತು ನಮ್ಮ ಹಕ್ಕುಗಳನ್ನು ಪಡೆದು ಕೊಳ್ಳಬಹುದು ಎಂದು ಹೇಳಿದರು.

ಪ್ರಧಾನ ಕಾರ್ಯದರ್ಶಿ ಧರ್ಮಾಪುರ ನಾರಾಯಣ್ ಮಾತನಾಡಿ, ಗ್ರಾಮೀಣ ಪ್ರದೇಶದ ಪತ್ರಕರ್ತರ ಜೀವನ ಮಟ್ಟ ಕಷ್ಟಕರವಾಗಿದ್ದು, ಈ ಸ್ಥಿತಿಯಲ್ಲೂ ಪತ್ರಕರ್ತರಾಗಿ ಕೆಲಸ ಮಾಡುತ್ತಿದ್ದಾರೆ. ಪತ್ರಿಕೋದ್ಯಮದ ವೃತ್ತಿಯ ಜೊತೆಗೆ ಆರ್ಥಿಕವಾಗಿ ಸದೃಢರಾಗಬೇಕು. ಗ್ರಾಮೀಣ ಭಾಗದ ಪತ್ರಕರ್ತರ ಸಮಸ್ಯೆಗಳಿಗೆ ಜಿಲ್ಲಾ ಸಂಘ ಸದಾ ಸ್ಪಂದಿಸಲಿದೆ ಎಂದು ಭರವಸೆ ನೀಡಿದರು. ಇದೇ ಸಂದರ್ಭದಲ್ಲಿ ನಿಕಟಪೂರ್ವ ಅಧ್ಯಕ್ಷ ವಿನಯ್ ಮತ್ತು ಪ್ರಧಾನ ಕಾರ್ಯದರ್ಶಿ ಭೇರ್ಯ ಮಹೇಶ್ ಮಾತನಾಡಿದರು. ಇದೇ ವೇಳೆ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಉಪಾಧ್ಯಕ್ಷ ರವಿ ಪಾಂಡವಪುರ, ಗ್ರಾಮೀಣ ಕಾರ್ಯದರ್ಶಿ ದಾರಾ ಮಹೇಶ್, ಖಜಾಂಚಿ ಎನ್. ಸುರೇಶ್, ಕಾರ್ಯಕಾರಿಣಿ ಸದಸ್ಯರಾದ ಸೋಮಶೇಖರ್ ಚಿಕಮರಳ್ಳಿ, ಎಸ್.ಕವಿತಾ, ಹನಗೋಡು ನಟರಾಜ್ ಹಾಜರಿದ್ದರು.

# 24ಲಕ್ಷ ಮೌಲ್ಯದ ಮದ್ಯ ನಾಶ



ಮೈಸೂರು: ಅಬಕಾರಿ ಇಲಾಖೆಯು ಅವಧಿ ಮೀರಿದ ಹಾಗೂ ದೀರ್ಘಕಾಲದಿಂದ ಮಾರಾಟವಾಗದೆ ಉಳಿದಿದ್ದ ಮದ್ಯವನ್ನು ನಾಶಪಡಿಸುವ ಕಾರ್ಯಾಚರಣೆಯನ್ನು ಗುರುವಾರ ನಡೆಸಿತು.

ಅಬಕಾರಿ ಉಪ ಆಯುಕ್ತ ಜೆ.ವಿವೇಕ್ ಆದೇಶದ ಮೇರೆಗೆ ಅಬಕಾರಿ ಉಪ ಅಧೀಕ್ಷಕ ಎಲ್.ಬಿ.ವಿಕ್ರಮ್, ಕೆಎಸ್‌ಬಿಸಿಎಲ್ ಲಿಕ್ಕರ್ ಡಿಪೋ ಹಾಗೂ ಮೈಸೂರು ಉಪ ವಿಭಾಗದ ಅಧಿಕಾರಿಗಳ ನೇತೃತ್ವದಲ್ಲಿ ಮೈಸೂರು ನಗರದ ಕೂರ್ಗಳ್ಳಿಯಲ್ಲಿರುವ ಕೆಎಸ್ ಬಿಸಿಎಲ್ ಲಿಕ್ಕರ್ ಡಿಪೋ ಮೈಸೂರು-1 ಮತ್ತು ಮೈಸೂರು-2ರಲ್ಲಿ ಈ ಪ್ರಕ್ರಿಯೆ ಕೈಗೊಳ್ಳಲಾಯಿತು. ಕಾರ್ಯಾಚರಣೆಯಲ್ಲಿ ವಿವಿಧ ಬ್ರಾಂಡ್ ಗಳ ಅವಧಿ ಮೀರಿದ 929 ರೆಡಿ ಪ್ಯಾಕ್ ಗಳ (8,870 ಲೀಟರ್) ಬಿಯರ್ ಹಾಗೂ ಬಹು ದಿನಗಳಿಂದ ಮಾರಾಟವಾಗದೇ ಉಳಿದಿದ್ದ 138 ರೆಡಿ ಪ್ಯಾಕ್‌ಗಳ(1,216 ಲೀಟರ್) ವೈನ್ ನಾಶಪಡಿಸಲಾಯಿತು. ನಾಶಪಡಿಸಲಾದ ಮದ್ಯದ ಒಟ್ಟು ಮೌಲ್ಯ ಸುಮಾರು 24ಲಕ್ಷ ಎಂದು ಅಧಿಕಾರಿಗಳು ತಿಳಿಸಿದರು. ಈ ವೇಳೆ ಕೆಎಸ್‌ಬಿಸಿಎಲ್ ಮೈಸೂರು-1 ಡಿಪೋದ ಮಳಿಗೆ ವ್ಯವಸ್ಥಾಪಕ ಡಿ.ಕೆ.ವೆಂಕಟೇಶ್, ಮೈಸೂರು-2 ಡಿಪೋದ ಮಳಿಗೆ ವ್ಯವಸ್ಥಾಪಕ ಎಂ.ಆರ್.ಯೋಗೇಶ್, ಅಬಕಾರಿ ನಿರೀಕ್ಷಕ ನಂದಿತ ಹಳದನಕರ್ ಹಾಗೂ ಎಸ್.ಪಿ.ರಾಧಾ, ಅಬಕಾರಿ ಉಪ ನಿರೀಕ್ಷಕ ಆನಂದ್ ಸೇರಿ ಇತರರು ಉಪಸ್ಥಿತರಿದ್ದರು.

# ಇಂದಿನಿಂದ ಗುಜರಾತ್ ಕರಕುಶಲ ಉತ್ಸವ



ಮೈಸೂರು: ನಗರದ ಹೊರ ವರ್ತುಲ ರಸ್ತೆಯ ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿರುವ ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್‌ನಲ್ಲಿ ಜುಲೈ 3ರಿಂದ 12ರವರೆಗೆ ಗುಜರಾತ್ ಕರಕುಶಲ ಉತ್ಸವ ಆಯೋಜಿಸಲಾಗಿದೆ ಎಂದು ಇಂಡೆಕ್ಸ್-ಸಿ ವ್ಯವಸ್ಥಾಪಕ (ಮಾರುಕಟ್ಟೆ) ಸ್ನೇಹನ್ ಮಕ್ಕಾನ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿ, ಉತ್ಸವವು ಗುಜರಾತ್ ನ ಕರಕುಶಲ ಮತ್ತು ಸಾಂಸ್ಕೃತಿಕ ಪರಂಪರೆ ಅನಾವರಣಗೊಳ್ಳಲಿದೆ. ಗುಜರಾತ್ ರಾಜ್ಯ ಸರ್ಕಾರದ ಅಂಗ ಸಂಸ್ಥೆಯಾದ ಇಂಡೆಕ್ಸ್ -ಸಿ(ಇಂಡಸ್ಟ್ರಿಯಲ್ ಎಕ್ಸ್‌ಟೆನ್ಸನ್ ಕಾಟೇಜ್) ಸಹಯೋಗದಲ್ಲಿ ಉತ್ಸವ ಹಮ್ಮಿಕೊಳ್ಳಲಾಗಿದೆ. ಜುಲೈ 3ರ ಸಂಜೆ 4ಕ್ಕೆ ಜವಳಿ ಅಭಿವೃದ್ಧಿ ಆಯುಕ್ತ ಎ.ಬಿ. ಬಸವರಾಜು ಉದ್ಘಾಟಿಸುವರು. ಇಂಡೆಕ್ಸ್-ಸಿ ಕಾರ್ಯನಿರ್ವಾಹಕ ನಿರ್ದೇಶಕ ಸಂಜಯ್ ಜೋಶಿ ಅಧ್ಯಕ್ಷತೆ ವಹಿಸುವರು ಎಂದು ಮಾಹಿತಿ ನೀಡಿದರು.

ಇಲ್ಲಿ ನಡೆಯುತ್ತಿರುವ ಸತತ 11ನೇ ವರ್ಷದ ಉತ್ಸವ ಇದಾಗಿದ್ದು, ನಿತ್ಯ ಬೆಳಿಗ್ಗೆ 10ರಿಂದ ರಾತ್ರಿ 9ರವರೆಗೆ ತೆರೆದಿರಲಿದೆ. ಗುಜರಾತ್‌ನ ಸಾಂಪ್ರದಾಯಿಕ ಕರಕುಶಲಗಾರರಿಗೆ ಅವರ ಉತ್ಪನ್ನಗಳನ್ನು ನೇರವಾಗಿ ಪ್ರದರ್ಶಿಸಿ, ಮಾರುವ ಮೂಲಕ ಜೀವನೋಪಾಯವನ್ನು ವೃದ್ಧಿಸಿಕೊಳ್ಳಲು ವೇದಿಕೆ ಕಲ್ಪಿಸಲಾಗುತ್ತಿದೆ. ಗುಜರಾತ್‌ನ ವಿವಿಧ ಭಾಗಗಳಿಂದ 100ಕ್ಕೂ ಹೆಚ್ಚು ಕರಕುಶಲಗಾರರು ಮತ್ತು ಕೈಮಗ್ಗ ನೇಕಾರರು ಭಾಗವಹಿಸಲಿದ್ದಾರೆ. ಸಂದರ್ಶಕರು ವಿಶಿಷ್ಟ ಕೈಮಗ್ಗ ಹಾಗೂ ಕರಕುಶಲ್ಯ ವಸ್ತುಗಳ ವೈವಿಧ್ಯಮಯ ಸಂಗ್ರಹವನ್ನು ಒಂದೇ ಸೂರಿನಡಿ ವೀಕ್ಷಿಸಿ ಖರೀದಿಸಬಹುದಾಗಿದೆ ಎಂದು ಹೇಳಿದರು. ರಾಷ್ಟ್ರ ಹಾಗೂ ರಾಜ್ಯ ಪ್ರಶಸ್ತಿ ಪುರಸ್ಕೃತ ಕರಕುಶಲಗಾರರು ಅಪರೂಪದ ಮತ್ತು ಅಳಿವಿನಂಚಿನಲ್ಲಿರುವ ಸಾಂಪ್ರದಾಯಿಕ ಕಲೆಗಳ ನೇರ ಪ್ರಾತ್ಯಕ್ಷಿಕೆ ನೀಡಲಿರುವುದು ವಿಶೇಷ. ಕಚ್ ಕ್ರಾಫ್ಟ್ ಗ್ಯಾಲರಿಯಲ್ಲಿ ಕಚ್ ಪ್ರದೇಶದ ಪ್ರಸಿದ್ಧ ಕುಚ್ಚಿ ಕಸೂತಿ, ಅಜ್ರಖ್ ಬ್ಲಾಕ್ ಪ್ರಿಂಟಿಂಗ್, ಬಂಧೇಜ್, ಶಾಲುಗಳು ಹಾಗೂ ಇತರ ಪರಂಪರೆಯ ಕರಕುಶಲ ವಸ್ತುಗಳನ್ನು ಪ್ರದರ್ಶಿಸಲಾಗುತ್ತದೆ ಎಂದರು.

ಜುಲೈ 3ರಿಂದ 5ರವರೆಗೆ ಗುಜರಾತ್ ಕ್ರೀಡೆ, ಯುವಜನ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಇಲಾಖೆಯ ಸಹಯೋಗದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮವೂ ನಡೆಯಲಿದೆ. ಪ್ರವೇಶ ಮತ್ತು ವಾಹನ ನಿಲುಗಡೆ ಸಂಪೂರ್ಣ ಉಚಿತವಾಗಿದೆ ಎಂದು ತಿಳಿಸಿದರು. ಬಿ.ಇಳಂಗೋವನ್, ಕೆ.ಎಸ್.ಟೈಲರ್, ರಾಕೇಶ್ ರೈ ಇದ್ದರು.

# ಹಳಕಟ್ಟಿ ಕನ್ನಡದ ಸಾಂಸ್ಕೃತಿಕ ಸೇತುವೆ

## ನಿತೀಶ್ ಪಾಟೀಲ್ ಹೇಳಿಕೆ | ವಚನ ಪಿತಾಮಹ ಡಾ.ಫ.ಗು.ಹಳಕಟ್ಟಿ ಜಯಂತ್ಯುತ್ಸವ



ಮೈಸೂರು: ವಚನ ಸಾಹಿತ್ಯವನ್ನು ಕರಾರುವಾಕ್ಕಾಗಿ ಸಂರಕ್ಷಿಸಿ ಮುಂದಿನ ಪೀಳಿಗೆಗೆ ಉಡುಗೊರೆಯಾಗಿ ನೀಡಿದ ಡಾ. ಫ.ಗು. ಹಳಕಟ್ಟಿ ಅವರು ಕನ್ನಡ ನಾಡಿನ ಮಹಾನ್ ಸಾಂಸ್ಕೃತಿಕ ಸೇತುವೆಯಾಗಿದ್ದಾರೆ ಎಂದು ಮೈಸೂರು ಮಹಾನಗರ ಪಾಲಿಕೆಯ ಆಡಳಿತಾಧಿಕಾರಿ ಹಾಗೂ ಪ್ರಾದೇಶಿಕ ಆಯುಕ್ತರಾದ ನಿತೀಶ್ ಪಾಟೀಲ್ ತಿಳಿಸಿದರು.

ನಗರದ ಕರ್ನಾಟಕ ಕಲಾಮಂದಿರದಲ್ಲಿ ಜಿಲ್ಲಾ ಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ ಹಾಗೂ ಡಾ. ಫ.ಗು. ಹಳಕಟ್ಟಿ ಜಯಂತೋತ್ಸವ ಸಮಿತಿಯ ವತಿಯಿಂದ ಆಯೋಜಿಸಲಾಗಿದ್ದ ಅವರ ಜನ್ಮದಿನ ಹಾಗೂ 'ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆ'ಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

**ಜ್ಞಾನ, ಸಂಸ್ಕಾರದ ಸಂಕೇತ ಹಳಕಟ್ಟಿ**

'ವಿದ್ಯಾಧನಂ ಸರ್ವಧನ ಪ್ರಧಾನಂ' ಎಂಬ ಸುಭಾಷಿತವು ಜ್ಞಾನದ ಮಹತ್ವವನ್ನು ಸಾರಿದರೆ, ಬಸವಾದಿ ಶರಣರ 'ಕಾಯಕವೇ ಕೈಲಾಸ' ಎಂಬ ಸಂದೇಶವು ಬದುಕಿನ ಸನ್ಮಾರ್ಗವನ್ನು ತೋರಿಸುತ್ತದೆ ಎಂದು ನಿತೀಶ್ ಪಾಟೀಲ್ ಹೇಳಿದರು. ಈ ಎರಡೂ ಅತ್ಯುನ್ನತ ಮೌಲ್ಯಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದ ಹಳಕಟ್ಟಿಯವರ ಜನ್ಮದಿನಾಚರಣೆಯು ಕೇವಲ ಒಂದು ವ್ಯಕ್ತಿಯ ಸ್ಮರಣೆಯಲ್ಲ; ಅದೊಂದು ಜ್ಞಾನ ಯಜ್ಞಕ್ಕೆ ಸಲ್ಲಿಸುವ ಗೌರವವಾಗಿದೆ. ಹಳ್ಳಿ ಹಳ್ಳಿಗಳಿಗೆ ಸಂಚರಿಸಿ ಸಾವಿರಾರು ವಚನಗಳನ್ನು ಸಂಗ್ರಹಿಸಿದ ಅವರ ಸಾಧನೆ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ದಾಖಲಾಗಿದೆ. ಇಂದಿನ ತಂತ್ರಜ್ಞಾನ ಯುಗದಲ್ಲಿ ಜ್ಞಾನ ಸುಲಭವಾಗಿ ಸಿಗಬಹುದು, ಆದರೆ ಅದರ ಸದ್ಬಳಕೆಯಿಂದ ಮಾತ್ರ ಸಂಸ್ಕಾರ ರೂಪಿಸಲು ಸಾಧ್ಯ. ಯುವ ಪೀಳಿಗೆಯಲ್ಲಿ ಕನ್ನಡದ ಪ್ರೀತಿ ಮತ್ತು ಸಾಂಸ್ಕೃತಿಕ ಹೊಣೆಗಾರಿಕೆಯನ್ನು ಮೂಡಿಸುವುದೇ ಈ ಆಚರಣೆಯ ಪವಿತ್ರ ಸಂಕಲ್ಪವಾಗಿದೆ ಎಂದರು. ಇದೇ ಸಂದರ್ಭದಲ್ಲಿ ಡಾ. ಮಹೇಂದ್ರ ಮೂರ್ತಿ ದೇವನೂರು ಅವರು ರಚಿಸಿರುವ 'ವಚನ ಪಿತಾ ಮಹ ಡಾ. ಫ. ಗು. ಹಳಕಟ್ಟಿ' ಎಂಬ ಕೃತಿಯನ್ನು ಕವಿ ಕೆ.ಸಿ. ಶಿವಪ್ಪ ಬಿಡುಗಡೆ ಮಾಡಿದರು. ಇದೇ ವೇದಿಕೆಯಲ್ಲಿ ಶರಣ ಸಾಹಿತ್ಯ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ ಸಾಧಕರಾದ ಮ.ಗು. ಸದಾನಂದಯ್ಯ, ಡಾ.ಹೆಳವರಹುಂಡಿ ಸಿದ್ದಪ್ಪ, ಪ್ರೊ. ಚಂದ್ರಶೇಖರಯ್ಯ, ಡಾ.ಲತಾ ರಾಜಶೇಖರ್, ಪ್ರೊ.ಎಸ್.ಶಿವರಾಜಪ್ಪ, ಶಕುಂತಲಾ ಜಯದೇವ, ಎಲ್. ಶಿವಲಿಂಗಪ್ಪ, ಶಾರದಾ ಶಿವಲಿಂಗಸ್ವಾಮಿ, ಶರಣೆ ಎಂ.ಎ. ನೀಲಾಂಬಿಕೆ, ಡಿ.ಎ. ಲೋಕಪ್ಪ, ವಚನ ಕುಮಾರಸ್ವಾಮಿ, ಚೌಹಳ್ಳಿ ಅಂಗರಾಜಪ್ಪ, ಕಲ್ಮಳ್ಳಿ ನಟರಾಜು ಹಾಗೂ ಕುಮಾರಿ ವಚನ ಚೂಡಾಮಣಿ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ತಹಶೀಲ್ದಾರ್ ಶ್ರೀನಿವಾಸ್ ಸೇರಿದಂತೆ ಪ್ರಮುಖರು, ಅಧಿಕಾರಿಗಳು ಉಪಸ್ಥಿತರಿದ್ದರು.

### ಹರಿದ ಮನಸ್ಸುಗಳನ್ನು ಜೋಡಿಸುವ ಸಿದ್ಧಾಂತ

ಗಾವಡಗೆರೆ ಶ್ರೀ ಗುರುಲಿಂಗಜಂಗಮ ದೇವರ ಮಠದ ಶ್ರೀ ನಟರಾಜಸ್ವಾಮಿಗಳು ದಿವ್ಯ ಸಾನಿಧ್ಯ ವಹಿಸಿ ಮಾತನಾಡಿ, ತೇಪೆ ಹಾಕಿದ ಹರಿದ ಬಟ್ಟೆಯಲ್ಲೇ ತಮ್ಮ ಬಡತನವನ್ನು ಮುಚ್ಚಿಕೊಳ್ಳುತ್ತಿದ್ದ ಹಳಕಟ್ಟಿಯವರು, ಇಂದು ಹರಿದು ಹಂಚಿಹೋಗಿರುವ ಮನಸ್ಸುಗಳನ್ನು ಒಂದುಗೂಡಿಸುವ ಶ್ರೇಷ್ಠ ಸಿದ್ಧಾಂತವನ್ನು ಜಗತ್ತಿಗೆ ಕೊಟ್ಟು ಹೋಗಿದ್ದಾರೆ. ಅಂದು ಅವರು ಶ್ರಮಿಸದೇ ಹೋಗಿದ್ದರೆ ಶರಣರ ಅಮೂಲ್ಯ ವಚನ ಸಾಹಿತ್ಯವು ಕಾಲಗರ್ಭದಲ್ಲಿ ಗೆದ್ದಲು ಹಿಡಿದು ನಾಶವಾಗಿ ಹೋಗುತ್ತಿತ್ತು. ವಚನಗಳು ಯಾವುದೇ ಒಂದು ನಿರ್ದಿಷ್ಟ ಧರ್ಮಕ್ಕೆ ಸೀಮಿತವಾಗಿರದೆ ಇಡೀ ಮಾನವಕುಲವನ್ನು ಒಟ್ಟಿಗೆ ಮುನ್ನಡೆಸುವ ದಿವ್ಯ ಶಕ್ತಿಯನ್ನು ಹೊಂದಿವೆ ಎಂಬುದನ್ನು ಹಳಕಟ್ಟಿಯವರು ಸಾಬೀತುಪಡಿಸಿದ್ದಾರೆ ಎಂದು ನುಡಿದರು.

### ಮನೆ ಮಾರಿ ವಚನ ಉಳಿಸಿದ 'ವಚನ ಪಿತಾಮಹ'

ಮುಖ್ಯ ಭಾಷಣಕಾರರಾಗಿ ಪಾಲ್ಗೊಂಡಿದ್ದ ಖ್ಯಾತ ಕವಿ ಕೆ.ಸಿ. ಶಿವಪ್ಪ ಅವರು ಮಾತನಾಡಿ, ಜುಲೈ 2, 1880 ರಂದು ಧಾರವಾಡದಲ್ಲಿ ಜನಿಸಿ, ವೃತ್ತಿಯಿಂದ ವಕೀಲರಾಗಿದ್ದ ಫಕೀರಪ್ಪ ಗುರುಬಸಪ್ಪ ಹಳಕಟ್ಟಿಯವರು ವಿಜಯಪುರವನ್ನು ತಮ್ಮ ಕರ್ಮಭೂಮಿಯನ್ನಾಗಿಸಿಕೊಂಡರು. ಮಠಗಳ ಕತ್ತಲೆ ಕೋಣೆಗಳಲ್ಲಿ ತಾಳೆಗರಿಗಳಲ್ಲಿದ್ದ ವಚನಗಳನ್ನು ರಕ್ಷಿಸಲು ಅವರು ಸೈಕಲ್ ಏರಿ ಹಳ್ಳಿ ಹಳ್ಳಿಗಳನ್ನು ಸುತ್ತಿದರು. ಆ ತಾಡೋಲೆಗಳನ್ನು ಮುದ್ರಿಸಲು ಹಣವಿಲ್ಲದಿದ್ದಾಗ ತಮ್ಮ ಸ್ವಂತ ಮನೆಯನ್ನೇ ಮಾರಿ 'ಹಿತಚಿಂತಕ' ಮುದ್ರಣಾಲಯ ಸ್ಥಾಪಿಸಿದರು. ಬಾಡಿಗೆ ಮನೆಯಲ್ಲಿ ಕಷ್ಟದ ಜೀವನ ನಡೆಸುತ್ತಲೇ 175ಕ್ಕೂ ಹೆಚ್ಚು ಕೃತಿಗಳನ್ನು ಸಂಪಾದಿಸಿದರು ಹಾಗೂ 'ಶಿವಾನುಭವ' ಪತ್ರಿಕೆಯ ಮೂಲಕ ವಚನಗಳನ್ನು ಮನೆಮನೆಗೆ ತಲುಪಿಸಿದರು. ಅವರ ಸೇವೆಯನ್ನು ಪರಿಗಣಿಸಿ 1926ರ ಬಳ್ಳಾರಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ, ರಾವ್ ಬಹಾದ್ದೂರ ಪದವಿ ಮತ್ತು ಗೌರವ ಡಿ.ಲಿಟ್ ನೀಡಲಾಗಿತ್ತು. 1964ರಲ್ಲಿ ಅವರು ಲಿಂಗೈಕ್ಯರಾದಾಗ ಭೌತಿಕ ಆಸ್ತಿ ಇಲ್ಲದಿದ್ದರೂ ನಾಡಿಗೆ ಕೋಟ್ಯಂತರ ರೂಪಾಯಿ ಮೌಲ್ಯದ ಜ್ಞಾನದ ಆಸ್ತಿಯನ್ನು ಬಿಟ್ಟುಹೋದ ದೈತ್ಯ ಶಕ್ತಿಯಾಗಿದ್ದಾರೆ ಎಂದು ಸ್ಮರಿಸಿದರು.

# ಅಕ್ರಮ ಜೂಜಾಟ: ಏಳು ಮಂದಿ ಬಂಧನ

ಗುಂಡ್ಲುಪೇಟೆ, ಜು.02-ಅಕ್ರಮವಾಗಿ ಸಾರ್ವಜನಿಕ ಸ್ಥಳದಲ್ಲಿ ಜೂಜಾಟವಾಡುತ್ತಿದ್ದ ಏಳು ಮಂದಿಯನ್ನು ತೆರಕಣಾಂಬಿ ಠಾಣೆ ಪೊಲೀಸರು ಬಂಧಿಸಿ, 7,600 ರೂ. ನಗದು ವಶಕ್ಕೆ ಪಡೆದಿದ್ದಾರೆ.

ತಾಲೂಕಿನ ಕೆಲಸೂರು ಗ್ರಾಮದ ಚನ್ನನಾಯಕ, ಶ್ರೀನಿವಾಸ, ಶ್ರೀಕಾಂತ್, ದೊಡ್ಡಸ್ವಾಮಿ, ಆನಂದ, ಶಿವು, ಸದಾನಂದ ಬಂಧಿತ ಆರೋಪಿಗಳು. ಕೆಲಸೂರು ಗ್ರಾಮದ ಸಾರ್ವಜನಿಕ ಸ್ಥಳದಲ್ಲಿ ಅಕ್ರಮವಾಗಿ ಜೂಜಾಟವಾಡುತ್ತಿದ್ದ ಖಚಿತ ಮಾಹಿತಿ ಮೇರೆಗೆ ತೆರಕಣಾಂಬಿ ಠಾಣೆ ಸಬ್ ಇನ್ಸ್ ಪೆಕ್ಟರ್ ಮಹೇಶ್ ನೇತೃತ್ವದ ತಂಡ ದಾಳಿ ನಡೆಸಿ ನಾಲ್ವರು ಆರೋಪಿಗಳನ್ನು ಬಂಧಿಸಿ, ಪಣಕ್ಕಿಟ್ಟಿದ್ದ 7,600 ರೂ. ನಗದು ವಶಪಡಿಸಿಕೊಂಡಿದ್ದಾರೆ. ಈ ಸಂಬಂಧ ತೆರಕಣಾಂಬಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಚಿರತೆ ದಾಳಿಗೆ ಕರು ಬಲಿ

ಗುಂಡ್ಲುಪೇಟೆ: ಜಮೀನಿನೊಂದರ ಕೊಟ್ಟಿಗೆಯಲ್ಲಿ ಕಟ್ಟಿಹಾಕಿದ್ದ ಕರುವೊಂದನ್ನು ಚಿರತೆ ಎಳೆದೊಯ್ದು ಕೊಂದು ಹಾಕಿರುವ ಘಟನೆ ಕೊಡಸೋಗೆ ಗ್ರಾಮದ ಹೊರವಲಯದಲ್ಲಿ ನಡೆದಿದೆ. ಇದರಿಂದ ರೈತರು ಭಯಭೀತರಾಗಿದ್ದಾರೆ.

ತಾಲೂಕಿನ ಕೊಡಸೋಗೆ ಗ್ರಾಮದ ರೈತ ವೆಂಕಟೇಶ್ ಬಿನ್ ಸುಬ್ಬಶೆಟ್ಟಿ ಎಂಬುವರಿಗೆ ಸೇರಿದ ಕರು ಇದಾಗಿದೆ. ರಾತ್ರಿ ವೇಳೆ ಜಮೀನಿನ ಕೊಟ್ಟಿಗೆಯಲ್ಲಿ ಕಟ್ಟಿದ್ದ ಕರುವಿನ ಮೇಲೆ ಚಿರತೆ ದಾಳಿ ನಡೆಸಿ ಸುಮಾರು 500 ಮೀಟರ್ ದೂರ ಎಳೆದೊಯ್ದು ಕೊಂದು, ಮಾಂಸ ತಿಂದು ಉಳಿದ ದೇಹವನ್ನು ಬಿಟ್ಟುಹೋಗಿದೆ. ಮಾಹಿತಿ ಅರಿತ ಬಫರ್ ಜೋನ್ ವಲಯದ ಅರಣ್ಯಾಧಿಕಾರಿಗಳು ಸ್ಥಳಕ್ಕೆ ಆಗಮಿಸಿ, ಪರಿಶೀಲನೆ ನಡೆಸಿದ್ದಾರೆ.

**ಚಿರತೆ ಸೆರೆ ಆಗ್ರಹ:** ಜಮೀನಿನಲ್ಲಿ ವಾಸವಿರುವ ರೈತರು ಹಾಗೂ ಜಾನುವಾರುಗಳನ್ನು ಮೇವು ಮೇಯಿಸಲು ಜಮೀನಿಗೆ ತೆರಳುವ ರೈತರು ಹಾಗೂ ಗ್ರಾಮಸ್ಥರು ಭಯಭೀತರಾಗಿದ್ದಾರೆ. ಶೀಘ್ರದಲ್ಲೆ ಅರಣ್ಯ ಇಲಾಖೆಯವರು ಕಾರ್ಯಾಚರಣೆ ನಡೆಸಿ ಚಿರತೆ ಸೆರೆ ಹಿಡಿಯಲು ಮುಂದಾಗಬೇಕೆಂದು ರೈತ ಮುಖಂಡ ಕೊಡಸೋಗೆ ರಾಜಣ್ಣ ಒತ್ತಾಯಿಸಿದ್ದಾರೆ.



# ಸಫಾರಿ ಕೇಂದ್ರ, ಘನತ್ಯಾಜ್ಯ ಘಟಕಕ್ಕೆ ಡಿಸಿ ಭೇಟಿ



**ಚಾಮರಾಜನಗರ,** ಜಿಲ್ಲಾಧಿಕಾರಿ ಶ್ರೀರೂಪ ಅವರು ಗುಂಡ್ಲುಪೇಟೆ ಭಾಗದ ಶಾಲೆ, ದೇವಾಲಯ, ಪ್ರವಾಸಿ ತಾಣಕ್ಕೆ ಭೇಟಿ ನೀಡಿ ಸೌಲಭ್ಯಗಳನ್ನು ಪರಿಶೀಲಿಸಿದರು.

ಗುಂಡ್ಲುಪೇಟೆ ಪಟ್ಟಣದ ಶತಮಾನ ಪೂರೈಸಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಭೇಟಿ ನೀಡಿ ಪರಿಶೀಲಿಸಿದರು. ಚಿಕ್ಕತುಪ್ಪೂರಿನಲ್ಲಿರುವ ಆದರ್ಶ ಶಾಲೆಗೆ ಭೇಟಿ ಕೊಟ್ಟು ವೀಕ್ಷಿಸಿದ ಜಿಲ್ಲಾಧಿಕಾರಿಯವರು ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು.

ತ್ರಿಯಂಬಕಪುರ ಗ್ರಾಮದಲ್ಲಿರುವ ಇತಿಹಾಸ ಪ್ರಸಿದ್ಧ ತ್ರಿಯಂಬಕೇಶ್ವರ ದೇವಾಲಯಕ್ಕೆ ತೆರಳಿ ದೇವಾಲಯದ ವಿನ್ಯಾಸ ಹಾಗೂ ವಾಸ್ತುಶಿಲ್ಪವನ್ನು ವೀಕ್ಷಿಸಿದರು. ದೇವಾಲಯದ ಐತಿಹಾಸಿಕ ಹಿನ್ನೆಲೆ ಹಾಗೂ ಸಂರಕ್ಷಣೆ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು.

ಪ್ರಸಿದ್ಧ ಪ್ರವಾಸಿ ತಾಣವಾದ ಬಂಡೀಪುರದ ಸಫಾರಿ ಕೇಂದ್ರಕ್ಕೆ ಭೇಟಿ ನೀಡಿ ಪ್ರವಾಸಿಗರಿಗೆ ಒದಗಿಸಿರುವ ಸೌಲಭ್ಯಗಳನ್ನು ವೀಕ್ಷಿಸಿದರು. ಸಫಾರಿ ಕೇಂದ್ರದಲ್ಲಿ ಮಾರಾಟ ಮಾಡಲಾಗುತ್ತಿರುವ ಉತ್ಪನ್ನಗಳನ್ನು ವೀಕ್ಷಿಸಿದ ಜಿಲ್ಲಾಧಿಕಾರಿಯವರು ಸ್ಥಳೀಯವಾಗಿ ಉತ್ಪಾದಿಸಿದ ಕರಕುಶಲ ವಸ್ತುಗಳನ್ನು ಮಾರಾಟ ಮಾಡಲು ಅವಕಾಶ ಮಾಡಿಕೊಡುವಂತೆ ಅರಣ್ಯ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಶ್ರೀರೂಪ ಅವರು ತಿಳಿಸಿದರು.

ಗುಂಡ್ಲುಪೇಟೆ ಹೊರವಲಯದಲ್ಲಿರುವ ಘನತ್ಯಾಜ್ಯ ವಿಲೇವಾರಿ ಘಟಕಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಮೇಲುಕಾಮನಹಳ್ಳಿಯಲ್ಲಿ ಬುಡಕಟ್ಟು ವಿವಿದ್ದೋದ್ದೇಶ ಕೇಂದ್ರ ಕಾಮಗಾರಿಯನ್ನು ವೀಕ್ಷಿಸಿದರು. ಭೇಟಿಯ ವೇಳೆ ತಹಶೀಲ್ದಾರ್ ತನ್ಮಯ್, ಕ್ಷೇತ್ರ ಶಿಕ್ಷಣಾಧಿಕಾರಿ ಸ್ವಾಮಿ, ವಲಯ ಅರಣ್ಯಾಧಿಕಾರಿ ಸತೀಶ್, ಗುಂಡ್ಲುಪೇಟೆ ಪುರಸಭೆ ಮುಖ್ಯಾಧಿಕಾರಿ ಶರವಣ, ಇತರರು ಇದ್ದರು.

## ಬಸವರಾಜೇಂದ್ರ ಆಸ್ಪತ್ರೆಯ ಮುಖ್ಯಸ್ಥ ಡಾ. ಬಸವರಾಜೇಂದ್ರ ಹೇಳಿಕೆ

# ತಮ್ಮ ಮನೆ, ಸುತ್ತಮುತ್ತಲಿನ ಪ್ರದೇಶದಲ್ಲಿ ಗಿಡಗಳನ್ನು ನೆಟ್ಟು ಕಾಪಾಡಿ



ಚಾಮರಾಜನಗರ, ಕೇಂದ್ರ ಸರ್ಕಾರದ ಸಹಕಾರ ಸಚಿವಾಲಯವು ಐದು ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ರಾಜ್ಯಾದ್ಯಂತ ಆಚರಿಸಲಾಗುತ್ತಿರುವ ಸಹಕಾರ ಸಪ್ತಾಹ ಅಂಗವಾಗಿ ಚಾಮರಾಜನಗರ ಜಿಲ್ಲಾ ಸೌಹಾರ್ದ ಸಹಕಾರಿಗಳ ವತಿಯಿಂದ ನಗರದ ಸರ್ಕಾರಿ ಪಿ. ಡಬ್ಲ್ಯೂ.ಡಿ. ಶಾಲೆಯಲ್ಲಿ ಗುರುವಾರ ಗಿಡ ನೆಡುವ ಕಾರ್ಯಕ್ರಮ ನಡೆಯಿತು.

ನಗರದ ಸರ್ಕಾರಿ ಪಿಡಬ್ಲೂ ?ಯಡಿ ಶಾಲೆಯನ್ನು ದತ್ತು ಪಡೆದಿರುವ ಶಾಲೆಯ ಆವರಣದಲ್ಲಿ ಬಸವರಾಜೇಂದ್ರ ಆಸ್ಪತ್ರೆಯ ಮುಖ್ಯಸ್ಥ ಡಾ. ಬಸವರಾಜೇಂದ್ರ ಹಾಗೂ ಅವರ ಪತ್ನಿ ಶ್ವೇತಾ ಶಶಿಧರ್, ಗುರುಪ್ರಸಾದ್ ಬಂಗೇರ ಪ್ರಾಂತ್ಯ ಅಧಿಕಾರಿ ಇವರುಗಳು ಗಿಡ ನೆಟ್ಟು, ನೆರವೇರಿಸುವ ಮೂಲಕ ಉದ್ಘಾಟಿಸಿದರು.

ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ಮೈಸೂರು ಪ್ರಾಂತ್ಯ ಅಧಿಕಾರಿ ಗುರುಪ್ರಸಾದ್ ಬಂಗೇರ, ಸಹಕಾರ ಸಚಿವಾಲಯ ಐದು ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ರಾಜ್ಯದ ವಿವಿಧೆಡೆ ಸಹಕಾರ ಸಪ್ತಾಹ ಆಚರಿಸಲಾಗುತ್ತಿದ್ದು, ಅದರ ಅಂಗವಾಗಿ ಪರಿಸರ ಸಂರಕ್ಷಣೆಯ ಉದ್ದೇಶದಿಂದ ಗಿಡ ನೆಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಈ ಅಭಿಯಾನಕ್ಕೆ ಮೈಸೂರು ಜಿಲ್ಲೆಯಲ್ಲಿ ಚಾಲನೆ ನೀಡಲಾಗಿದ್ದು, ಇದೀಗ ಚಾಮರಾಜನಗರದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿದೆ. ಪರಿಸರದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಿ ಹೆಚ್ಚಿನ ಸಂಖ್ಯೆಯಲ್ಲಿ ಗಿಡಗಳನ್ನು ನೆಟ್ಟು ಅವುಗಳನ್ನು ಸಂರಕ್ಷಿಸುವುದರಿಂದ ಜಾಗತಿಕ ತಾಪಮಾನ ಏರಿಕೆಯನ್ನು ನಿಯಂತ್ರಿಸಲು ನೆರವಾಗಲಿದೆ ಎಂದು ಹೇಳಿದರು.


ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಡಾ. ಬಸವರಾಜೇಂದ್ರ, ಶಾಲೆಗಳಲ್ಲಿ ಮಾತ್ರವಲ್ಲದೆ ಪ್ರತಿಯೊಬ್ಬರೂ ತಮ್ಮ ಮನೆ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ಗಿಡಗಳನ್ನು ನೆಟ್ಟು ಅವುಗಳನ್ನು ಪೋಷಿಸುವ ಜವಾಬ್ದಾರಿ ವಹಿಸಬೇಕು. ಕಾಡನ್ನು ಕಾಡಾಗಿಯೇ ಉಳಿಸಿ, ಪರಿಸರ ಸಂರಕ್ಷಣೆಗೆ ಎಲ್ಲರೂ ಕೈಜೋಡಿಸಿದರೆ ಮುಂದಿನ ಪೀಳಿಗೆಗೆ ಉತ್ತಮ ಪರಿಸರವನ್ನು ಉಳಿಸಬಹುದು ಎಂದು ಹೇಳಿದರು.

ಮುಖ್ಯ ಅತಿಥಿಯಾಗಿ ಮಾತನಾಡಿದ ಉದ್ದೇಶಿತ ಚಾಮರಾಜನಗರ ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟದ ಮುಖ್ಯ ಪ್ರವರ್ತಕರಾದ ವೀರಭದ್ರಸ್ವಾಮಿ, ಸೌಹಾರ್ದ ಸಹಕಾರಿ ಸಂಘಗಳು ಕೇವಲ ಆರ್ಥಿಕ ಚಟುವಟಿಕೆಗಳಿಗೆ ಸೀಮಿತವಾಗದೆ ಪರಿಸರ ಸಂರಕ್ಷಣೆ ಸೇರಿದಂತೆ ಸಾಮಾಜಿಕ ಕಾರ್ಯಕ್ರಮಗಳಲ್ಲೂ ಸಕ್ರಿಯವಾಗಿ ಪಾಲ್ಗೊಳ್ಳಬೇಕು. ಸಹಕಾರ ಸಂಘಗಳು ಜನರ ಆರ್ಥಿಕ ಅಭಿವೃದ್ಧಿಯ ಜೊತೆಗೆ ಸಮಾಜಮುಖಿ ಕಾರ್ಯಗಳಲ್ಲಿಯೂ ಪ್ರಮುಖ ಪಾತ್ರ ವಹಿಸುತ್ತಿವೆ ಎಂದು ತಿಳಿಸಿದರು. "ಸಹಕಾರದಿಂದ ಸಮೃದ್ಧಿ" ಎಂಬ ಧ್ಯೇಯವಾಕ್ಯದೊಂದಿಗೆ ನಡೆದ ಕಾರ್ಯಕ್ರಮದಲ್ಲಿ ಪರಿಸರ ಸಂರಕ್ಷಣೆ, ಹಸಿರು ವಾತಾವರಣ ನಿರ್ಮಾಣ ಹಾಗೂ ಸುಸ್ಥಿರ ಅಭಿವೃದ್ಧಿಗೆ ಸಹಕಾರ ಸಂಘಗಳ ಪಾತ್ರದ ಕುರಿತು ಅರಿವು ಮೂಡಿಸಲಾಯಿತು.

ಕಾರ್ಯಕ್ರಮದಲ್ಲಿ ಚಾಮರಾಜನಗರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರುಗಳು ಹಾಗೂ ಚಾಮರಾಜನಗರ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಯದ ಶ್ರೀ ಬಲರಾಮ್ ಎನ್, ಶಾಲೆಯ ಮುಖ್ಯಶಿಕ್ಷಕರು, ಶಿಕ್ಷಕರು, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಸೌಹಾರ್ದ ಸಹಕಾರಿಗಳ ಪ್ರತಿನಿಧಿ ಗಳಾದ ಬಾಲಸುಬ್ರಹ್ಮಣ್ಯ, ನಂಜುಂಡಸ್ವಾಮಿ, ಮಲ್ಲಿಕಾರ್ಜುನ ಸ್ವಾಮಿ, ಮಹದೇವ ಸ್ವಾಮಿ ಬಾಬು, ಮಹದೇವಸ್ವಾಮಿ (ರೇನಾ), ಸ್ನೇಹ ಜ್ಯೋತಿ ಮಹಿಳಾ ಸೌಹಾರ್ದ ಶ್ರೀಮತಿ ಮಂಜುಳಾ, ಜೋಸೆಫ್, ಮುತ್ತುರಾಜ್, ಪ್ರಸನ್ನ ಕುಮಾರ್ ಶ್ರೀಮತಿ ಕವಿತಾ, ರಾಜೇಂದ್ರ, ಹಾಗೂ ಇತರೆ ಸಿಬ್ಬಂದಿ ವರ್ಗದವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಡಾ.ಎಫ್.ಜಿ.ಹಳಕಟ್ಟಿ ಕನ್ನಡ ನಾಡು-ನುಡಿಯ ಅಪರೂಪ ಸಾಹಿತಿ: ಡಾ.ಯು.ಎಂ.ರವಿ
## ವಚನ ಸಾಹಿತ್ಯ ಸಂರಕ್ಷಣೆಗೆ ಹಳಕಟ್ಟಿ ಕೊಡುಗೆ ಅಪಾರ

**ರಾಮನಗರ:** ಪತ್ರಕರ್ತ, ವಚನ ಸಾಹಿತ್ಯ ಸಂಗ್ರಾಹಕ ಹಾಗೂ ಕನ್ನಡ ನಾಡು–ನುಡಿಯ ಅಪರೂಪದ ಅಭಿಮಾನಿಯಾಗಿದ್ದ ಡಾ.ಎಫ್.ಜಿ.ಹಳಕಟ್ಟಿ ಅವರು ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯ ಬೆಳವಣಿಗೆಗೆ ಅಪಾರ ಕೊಡುಗೆ ನೀಡಿದ್ದಾರೆ ಎಂದು ಜಾನಪದ ಲೋಕದ ಕ್ಯೂರೇಟರ್ ಡಾ. ಯು.ಎಂ. ರವಿ ಹೇಳಿದರು.




ನಗರದ ಕಂದಾಯ ಭವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಆಯೋಜಿಸಿದ್ದ ಡಾ. ಎಫ್.ಜಿ. ಹಳಕಟ್ಟಿ ಅವರ ಜನ್ಮದಿನ ಹಾಗೂ ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಹಳಕಟ್ಟಿ ಅವರು ಸರಳ ಕನ್ನಡದ ಮೂಲಕ ಜ್ಞಾನ, ನೀತಿ ಮತ್ತು ಸಮಾನತೆಯ ಸಂದೇಶವನ್ನು ಜನಸಾಮಾನ್ಯರಿಗೆ ತಲುಪಿಸಿದರು. ಜಾತಿ, ಮತ, ಲಿಂಗಭೇದಗಳನ್ನು ತೊರೆದು ಮಾನವೀಯ ಮೌಲ್ಯಗಳೊಂದಿಗೆ ಬದುಕುವ ಸಂದೇಶವನ್ನು ವಚನ ಸಾಹಿತ್ಯದ ಮೂಲಕ ಸಾರಿದರು. ಸುಮಾರು 24 ಸಾವಿರ ವಚನಗಳಲ್ಲಿ 10 ಸಾವಿರಕ್ಕೂ ಅಧಿಕ ವಚನಗಳನ್ನು ಸಂಗ್ರಹಿಸಿದ ಅಪರೂಪದ ಸಾಧಕರಾಗಿದ್ದಾರೆ ಎಂದು ತಿಳಿಸಿದರು.

ಕರ್ನಾಟಕ, ಆಂಧ್ರಪ್ರದೇಶ ಹಾಗೂ ಮಹಾರಾಷ್ಟ್ರದ ವಿವಿಧ ಭಾಗಗಳಲ್ಲಿ ಸಂಚರಿಸಿ ವಚನ ಸಾಹಿತ್ಯವನ್ನು ಸಂಗ್ರಹಿಸಿ ಸಂರಕ್ಷಿಸುವ ಮಹತ್ತರ ಕಾರ್ಯವನ್ನು ಹಳಕಟ್ಟಿ ಕೈಗೊಂಡಿದ್ದರು.

ಶಿಕ್ಷಣ, ವಕೀಲ ವೃತ್ತಿ ಹಾಗೂ ರಾಜಕೀಯ ಕ್ಷೇತ್ರದಲ್ಲಿಯೂ ಆಸಕ್ತಿ ಹೊಂದಿದ್ದರೂ, ತಮ್ಮ ಜೀವನವನ್ನು ವಚನ ಸಾಹಿತ್ಯದ ಸಂಗ್ರಹ ಮತ್ತು ಸಂರಕ್ಷಣೆಗೆ ಸಮರ್ಪಿಸಿದ್ದರು ಎಂದು ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಕೆ.ಸತೀಶ್ ಮಾತನಾಡಿ, 150ಕ್ಕೂ ಹೆಚ್ಚು ವರ್ಷಗಳಾದರೂ ಹಳಕಟ್ಟಿ ಅವರ ಸಾಧನೆ ಇಂದಿಗೂ ಪ್ರೇರಣೆಯಾಗಿದೆ. ವಿವಿಧ ಕ್ಷೇತ್ರಗಳ ಸಾಧಕರ ಜೀವನ ಚರಿತ್ರೆ ಮತ್ತು ಸಾಧನೆಗಳನ್ನು ದಾಖಲಿಸಿ ಪುಸ್ತಕ ರೂಪದಲ್ಲಿ ಪ್ರಕಟಿಸುವ ಕಾರ್ಯವನ್ನು ಇಲಾಖೆ ಕೈಗೊಳ್ಳಲಿದೆ ಎಂದು ತಿಳಿಸಿದರು. ವಚನ ಸಾಹಿತ್ಯದ ಸಂದೇಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಮೂಲಕ ಸಮಾನತೆ, ಮಾನವೀಯತೆ ಮತ್ತು ಸಮಾಜಸೇವೆಯ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕು ಎಂದು ಅವರು ಕರೆ ನೀಡಿದರು. ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಗಣ್ಯರನ್ನು ಸನ್ಮಾನಿಸಲಾಯಿತು.

ಆರೋಗ್ಯ ಇಲಾಖೆಯ ಅಧಿಕಾರಿ ಡಾ.ಕುಮಾರ್, ಪಶುಪಾಲನಾ ಇಲಾಖೆಯ ಅಧಿಕಾರಿ ರುಕ್ಮಿಣಿ, ಹಿರಿಯ ಕಲಾವಿದರು, ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಗಣ್ಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ರಾಷ್ಟ್ರೀಯ ಹೆದ್ದಾರಿಯ ಅಪೂರ್ಣಗೊಂಡ ರಸ್ತೆ
## ಕಾಮಗಾರಿಗಳನ್ನು ಶೀಘ್ರ ಪೂರ್ಣಗೊಳಿಸಲು ಡಿಸಿ ಸೂಚನೆ



**ಮಂಡ್ಯ :** ಮುಖ್ಯಮಂತ್ರಿಯವರ ನಿರ್ದೇಶನದಂತೆ, ರಾಜ್ಯದಲ್ಲಿ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಹಾಗೂ ರಾಷ್ಟ್ರೀಯ ಹೆದ್ದಾರಿ ವಿಭಾಗಗಳಿಂದ ಅನುಷ್ಠಾನಗೊಳ್ಳುತ್ತಿರುವ ರಸ್ತೆ ನಿರ್ಮಾಣ ಕಾಮಗಾರಿಗಳಿಗೆ ಸಂಬಂಧಿಸಿದ ಭೂಸ್ವಾಧೀನ ಮತ್ತು ಅರಣ್ಯ ಇಲಾಖೆ ತೀರುವಳಿಗಳ ಪ್ರಗತಿಯನ್ನು ಪರಿಶೀಲಿಸಲು ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗಳ ಪ್ರಗತಿ ಪರಿಶೀಲನಾ ಸಭೆಯು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಯಿತು.

ಸಭೆಯಲ್ಲಿ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವತಿಯಿಂದ ಮಂಡ್ಯ ಜಿಲ್ಲೆಯಲ್ಲಿ ಹಲವು ರಸ್ತೆ ಕಾಮಗಾರಿಗಳು ಅಪೂರ್ಣಗೊಂಡಿದ್ದು, ತುರ್ತಾಗಿ ಈ ಕಾಮಗಾರಿಗಳನ್ನು ಪೂರ್ಣಗೊಳಿಸುವಂತೆ ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು.

ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿಯಲ್ಲಿ ನಿರ್ಮಾಣಗೊಳ್ಳಲಿರುವ ವನ್ಯಜೀವಿ ಮೇಲ್ಸೇತುವೆಗೆ ಸಂಬಂಧಿಸಿದಂತೆ ಬಾಕಿಯಿರುವ ಅರಣ್ಯ ಅನುಮತಿ ಪ್ರಕ್ರಿಯೆಯನ್ನು ತ್ವರಿತಗೊಳಿಸಿ, ಕಡ್ಡಾಯ ಶುಲ್ಕ ಪಾವತಿ ಹಾಗೂ ಅರಣ್ಯ ಹಕ್ಕುಗಳ ಕಾಯ್ದೆ ಪ್ರಮಾಣಪತ್ರವನ್ನು ಶೀಘ್ರದಲ್ಲಿ ಪಡೆದು ಕಾಮಗಾರಿಯನ್ನು ಆದಷ್ಟು ಬೇಗ ಆರಂಭಿಸುವಂತೆ ಸಂಬಂಧಿತ ಇಲಾಖೆಗಳ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಭೆಯಲ್ಲಿ ಮಂಡ್ಯ ಜಿಲ್ಲಾ ಉಪ ವಿಭಾಗ ಅಧಿಕಾರಿಗಳಾದ ಎಂ.ಶಿವಮೂರ್ತಿ ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳು ಹಾಜರಿದ್ದರು.

# ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ: ಜು.10 ಕೊನೆಯ ದಿನ

**ಚನ್ನಪಟ್ಟಣ:** ಡಾ. ಯತೀಂದ್ರ ಸಿದ್ದರಾಮಯ್ಯ ಅಭಿಮಾನಿ ಬಳಗದ ವತಿಯಿಂದ 2025–26ನೇ ಶೈಕ್ಷಣಿಕ ವರ್ಷದ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ.75ಕ್ಕಿಂತ ಹೆಚ್ಚು ಅಂಕ ಪಡೆದ ಕುರುಬ ಸಮುದಾಯದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ದ್ವಿತೀಯ ವರ್ಷದ ಪ್ರತಿಭಾ ಪುರಸ್ಕಾರ ನೀಡಲು ಅರ್ಜಿ ಆಹ್ವಾನಿಸಲಾಗಿದೆ. ಜು.10ರೊಳಗೆ ಅರ್ಜಿ ಸಲ್ಲಿಸುವಂತೆ ಅಭಿಮಾನಿ ಬಳಗದ ನವಲೇಶ್ ಮನವಿ ಮಾಡಿದ್ದಾರೆ.

ಜಿಲ್ಲೆಯ ಕುರುಬ ಸಮುದಾಯದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗೌರವಿಸಿ, ಅವರ ಉನ್ನತ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ಈ ಪ್ರಶಸ್ತಿಯನ್ನು ಆಯೋಜಿಸಲಾಗಿದೆ. ಅರ್ಜಿ ಸಲ್ಲಿಸಲು ಚನ್ನಪಟ್ಟಣ ಕುರುಬರ ಹಾಸ್ಟೆಲ್‌ನಲ್ಲಿರುವ ತಾಲೂಕು ಕುರುಬ ಸಮುದಾಯ ಸಂಘದ ಕಚೇರಿಯನ್ನು ಸಂಪರ್ಕಿಸಬಹುದು. ಹೆಚ್ಚಿನ ಮಾಹಿತಿಗಾಗಿ ನಿವೃತ್ತ ಶಿಕ್ಷಕ ರಾಮಕೃಷ್ಣಪ್ಪ (ಮೊ. 8722347605) ಅಥವಾ ರವಿ (ಮೊ. 9844162087) ಅವರನ್ನು ಸಂಪರ್ಕಿಸುವಂತೆ ತಿಳಿಸಲಾಗಿದೆ. ಚನ್ನಪಟ್ಟಣಕ್ಕೆ ಬಂದು ಅರ್ಜಿ ಸಲ್ಲಿಸಲು ಸಾಧ್ಯವಾಗದ ವಿದ್ಯಾರ್ಥಿಗಳು ತಮ್ಮ ತಾಲೂಕಿನ ಕುರುಬ ಸಮುದಾಯ ಸಂಘದ ಅಧ್ಯಕ್ಷರ ಮೂಲಕವೂ ಅರ್ಜಿ ಸಲ್ಲಿಸಬಹುದು.

# ಪಾರದರ್ಶಕತೆ, ಜವಾಬ್ದಾರಿಯಿಂದ ಕಾರ್ಯನಿರ್ವಹಿಸಿ
## ಅಧಿಕಾರಿಗಳಿಗೆ ಸಿಇಒ ನಂದಿನಿ ಖಡಕ್ ಸೂಚನೆ



### ಲಸಿಕೆ ಅಭಿಯಾನಕ್ಕೆ ಜನಜಾಗೃತಿ

14ರಿಂದ 15.5 ವರ್ಷದ ಬಾಲಕಿಯರಿಗೆ ನೀಡಲಾಗುತ್ತಿರುವ ಹೆಚ್‌ಪಿವಿ ಲಸಿಕೆ ಕುರಿತು ಗ್ರಾಮ ಪಂಚಾಯಿತಿಗಳು ವ್ಯಾಪಕ ಜನಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಅಗತ್ಯ ಪ್ರಚಾರ ಸಾಮಗ್ರಿಗಳನ್ನು ಎಲ್ಲ ಗ್ರಾಮ ಪಂಚಾಯಿತಿಗಳಿಗೆ ಒದಗಿಸಲಾಗುವುದು ಎಂದು ನಂದಿನಿ ಕೆ.ಆರ್. ತಿಳಿಸಿದರು.

ಮಂಡ್ಯ: ಗ್ರಾಪಂಗಳಲ್ಲಿ ಪಾರದರ್ಶಕ, ಜವಾಬ್ದಾರಿಯುತ ಹಾಗೂ ಜನಸ್ನೇಹಿ ಆಡಳಿತಕ್ಕೆ ಆದ್ಯತೆ ನೀಡುವಂತೆ ಜಿಪಂ ಸಿಇಒ ನಂದಿನಿ ಕೆ.ಆರ್. ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾ ಪಂಚಾಯಿತಿ ಕೆಎಸ್‌ವಾನ್ ಸಭಾಂಗಣದಲ್ಲಿ ನಡೆದ ವಿಡಿಯೊ ಸಂವಾದ ಸಭೆಯಲ್ಲಿ ಮಾತನಾಡಿದ ಅವರು, ಗ್ರಾಮ ಪಂಚಾಯಿತಿ ಅಧಿಕಾರಿಗಳು ಮತ್ತು ಸಿಬ್ಬಂದಿ ಕಡ್ಡಾಯವಾಗಿ ಕರ್ತವ್ಯ ಆಪ್ ಮೂಲಕ ಹಾಜರಾತಿ ದಾಖಲಿಸಬೇಕು. ತಾಂತ್ರಿಕ ಸಮಸ್ಯೆಗಳಿದ್ದರೆ ಒಂದು ವಾರದೊಳಗೆ ಪರಿಹರಿಸಿ ನಿಯಮಿತವಾಗಿ ಹಾಜರಾತಿ ದಾಖಲಿಸುವಂತೆ ನಿರ್ದೇಶನ ನೀಡಿದರು.

ಪಿಡಿಒಗಳು ಸಾರ್ವಜನಿಕರಿಂದ ಬರುವ ದೂರವಾಣಿ ಕರೆಗಳನ್ನು ಕಡ್ಡಾಯವಾಗಿ ಸ್ವೀಕರಿಸಿ, ಸಮಸ್ಯೆಗಳಿಗೆ ತ್ವರಿತವಾಗಿ ಸ್ಪಂದಿಸಬೇಕು. ಕಚೇರಿ ವೇಳೆಯಲ್ಲಿ ಸಾರ್ವಜನಿಕರಿಗೆ ಲಭ್ಯವಿದ್ದು, ಜನಸ್ನೇಹಿ ಆಡಳಿತ ನೀಡುವಂತೆ ಸೂಚಿಸಿದರು.

ಎರಡು ಗ್ರಾಮ ಪಂಚಾಯಿತಿಗಳ ಹೆಚ್ಚುವರಿ ಪ್ರಭಾರ ಹೊಂದಿರುವ ಪಿಡಿಒಗಳು ಯಾವ ದಿನ ಯಾವ ಪಂಚಾಯಿತಿಯಲ್ಲಿ ಲಭ್ಯವಿರುತ್ತಾರೆ ಎಂಬ ಮಾಹಿತಿಯನ್ನು ಕಚೇರಿ ಸೂಚನಾ ಫಲಕದಲ್ಲಿ ಪ್ರಕಟಿಸಬೇಕು. ಮೂಲ ಪಂಚಾಯಿತಿಯಲ್ಲಿ ಸೋಮವಾರ, ಬುಧವಾರ ಹಾಗೂ ಶುಕ್ರವಾರ, ಹೆಚ್ಚುವರಿ ಪ್ರಭಾರದ ಪಂಚಾಯಿತಿಯಲ್ಲಿ ಮಂಗಳವಾರ, ಗುರುವಾರ ಮತ್ತು ಶನಿವಾರ ಹಾಜರಾಗುವಂತೆ ಸೂಚಿಸಿದರು. ಪ್ರತಿ ವಾರ ಕನಿಷ್ಠ ಒಂದು ಗ್ರಾಮ ಪಂಚಾಯಿತಿಗೆ ಅಧಿಕಾರಿಗಳು ಭೇಟಿ ನೀಡಿ ಅಭಿವೃದ್ಧಿ ಕಾಮಗಾರಿಗಳು ಹಾಗೂ ಸರ್ಕಾರದ ಯೋಜನೆಗಳ ಅನುಷ್ಠಾನವನ್ನು ಪರಿಶೀಲಿಸಿ ವರದಿ ಸಲ್ಲಿಸಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯಿತಿ ಉಪಕಾರ್ಯದರ್ಶಿಗಳು, ಮುಖ್ಯ ಲೆಕ್ಕಾಧಿಕಾರಿ, ಆರೋಗ್ಯ ಇಲಾಖೆ ಅಧಿಕಾರಿಗಳು, ತಾಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಉಪಸ್ಥಿತರಿದ್ದರು

# ಮಾದಕ ದ್ರವ್ಯ, ದೌರ್ಜನ್ಯ–ಅಕ್ರಮ ಸಾಗಣೆ ವಿರುದ್ಧ ಜಾಗೃತಿ ಜಾಥಾ

**ನಾಗಮಂಗಲ:** ಅಂತರರಾಷ್ಟ್ರೀಯ ಮಾದಕ ದ್ರವ್ಯ ಸೇವನೆ, ದೌರ್ಜನ್ಯ ಮತ್ತು ಅಕ್ರಮ ಸಾಗಣೆ ವಿರೋಧಿ ದಿನಾಚರಣೆಯ ಅಂಗವಾಗಿ ಆದಿಚುಂಚನಗಿರಿ ವೈದ್ಯಕೀಯ ಮಹಾವಿದ್ಯಾಲಯದ ಸಮುದಾಯ ವೈದ್ಯಕೀಯ ವಿಭಾಗ, ಎಐಎಂಎಸ್–ಎನ್‌ಎಸ್‌ಎಸ್ ಘಟಕ ಹಾಗೂ ಬೆಳ್ಳೂರು ಪೊಲೀಸ್ ಠಾಣೆಯ ಸಹಯೋಗದಲ್ಲಿ ಜಾಗೃತಿ ಜಾಥಾ ಆಯೋಜಿಸಲಾಯಿತು.



ಕಾರ್ಯಕ್ರಮಕ್ಕೆ ಪೂಜ್ಯ ಶ್ರೀಶ್ರೀಸತ್ ಕೀರ್ತಿನಾಥ ಸ್ವಾಮೀಜಿ ಚಾಲನೆ ನೀಡಿದರು. ಮಹಾವಿದ್ಯಾಲಯದ ಪ್ರಾಂಶುಪಾಲ ಡಾ.ಎಂ.ಜಿ.ಶಿವರಾಮು ಮಾತನಾಡಿ, ಮಾದಕ ವಸ್ತುಗಳ ಬಳಕೆ, ಸಂಗ್ರಹಣೆ, ಸಾಗಾಟ ಮತ್ತು ಮಾರಾಟ ಕಾನೂನುಬಾಹಿರವಾಗಿದ್ದು, ವಿದ್ಯಾರ್ಥಿಗಳು ಮಾದಕ ವ್ಯಸನದಿಂದ ದೂರವಿರಬೇಕು ಎಂದು ಸಲಹೆ ನೀಡಿದರು. ಆದಿಚುಂಚನಗಿರಿ ವಿಶ್ವವಿದ್ಯಾಲಯವನ್ನು ಮಾದಕ ವಸ್ತು ಮುಕ್ತ ಕ್ಯಾಂಪಸ್ ಆಗಿ ರೂಪಿಸುವ ಸಂಕಲ್ಪದೊಂದಿಗೆ ವಿದ್ಯಾರ್ಥಿಗಳಿಗೆ ಪ್ರತಿಜ್ಞಾ ವಿಧಿ ಬೋಧಿಸಲಾಯಿತು.

ಡಿವೈಎಸ್‌ಪಿ ಚಲುವರಾಜು ಮಾತನಾಡಿ, ಮಾದಕ ದ್ರವ್ಯಗಳ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸಿ, ಕಾನೂನು ನಿಯಮಗಳನ್ನು ಪಾಲಿಸುವಂತೆ ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಬೆಳ್ಳೂರು ಪೊಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ರವಿಕುಮಾರ್ ಮಾತನಾಡಿ, ಮಾದಕ ವಸ್ತುಗಳ ಬಳಕೆ ಅಥವಾ ಮಾರಾಟದ ಬಗ್ಗೆ ಮಾಹಿತಿ ದೊರೆತರೆ ತಕ್ಷಣ ಕಾಲೇಜು ಆಡಳಿತ ಅಥವಾ ಪೊಲೀಸರಿಗೆ ತಿಳಿಸುವಂತೆ ಮನವಿ ಮಾಡಿದರು. ಎಐಎಂಎಸ್ ಕ್ಯಾಂಪಸ್‌ನಿಂದ ಬೆಳ್ಳೂರು ಕ್ರಾಸ್‌ವರೆಗೆ ನಡೆದ ಜಾಗೃತಿ ಜಾಥಾದಲ್ಲಿ ವಿದ್ಯಾರ್ಥಿಗಳು, ಎನ್‌ಎಸ್‌ಎಸ್ ಸ್ವಯಂಸೇವಕರು, ನರ್ಸಿಂಗ್ ವಿದ್ಯಾರ್ಥಿಗಳು, ಉಪನ್ಯಾಸಕರು ಹಾಗೂ ಪೊಲೀಸ್ ಸಿಬ್ಬಂದಿ ಭಾಗವಹಿಸಿ, ಮಾದಕ ವಸ್ತು ಮುಕ್ತ ಸಮಾಜ ನಿರ್ಮಾಣದ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸಿದರು.

# ಬೆವರಿನ ಹನಿಗೆ ಬಂಗಾರದ ಪಟ್ಟ



ಡಾ.ಸುಧಾಕರ.ಜಿ.ಲಕ್ಕವಳ್ಳಿ

ಸ್ಫೂರ್ತಿ ಸುಧೆ - 58



ವೆಲ್ಲೂರಿನ ಕುಗ್ರಾಮದ ಕಿತ್ತುತಿನ್ನುವ ಬಡತನದ ನಡುವೆ ಮೊಳಕೆಯೊಡೆದ ಆಸೆ ಇಂದು ಆಡಳಿತದ ಗದ್ದುಗೆಯನ್ನೇರಿದೆ. ತಂದೆ ಕೃಷ್ಣನ್ ತಿಂಗಳಿಗೆ ಗಳಿಸುತ್ತಿದ್ದದ್ದು 4,500 ಮಾತ್ರ. ಹಸಿವಿನ ನೆರಳಲ್ಲೇ ಜಯಗಣೇಶ್ ಹತ್ತನೇ ತರಗತಿಯಲ್ಲೇ ಚರ್ಮದ ಕಾರ್ಖಾನೆಯಲ್ಲಿ ಮೇಲ್ವಿಚಾರಕನಾಗಿ ಬೆವರು ಸುರಿಸಿದರು. ಆದರೂ ವಿದ್ಯೆಯ ಬೆಳಕು ಆರಲಿಲ್ಲ. ಪೂರ್ಣ ಶಿಷ್ಯವೇತನದ ನೆರವಿನಿಂದ ಸರ್ಕಾರಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಯಂತ್ರಶಾಸ್ತ್ರ ಪದವಿ ಮುಗಿಸಿದರು.

ಬೆಂಗಳೂರಿನಲ್ಲಿ 2,500 ವೇತನದ ಉದ್ಯೋಗ ದೊರೆತರೂ,ಗ್ರಾಮದ ಯುವಪೀಳಿಗೆಯ ದಿಕ್ಕುತಪ್ಪಿದ ಬದುಕು ಕಂಡು ಮನ ಕಲಕಿತು. ಪರಿವರ್ತನೆಯ ಕೀಲಿಕೈ ಆಡಳಿತ ಸೇವೆ ಎಂದು ಮನಗಂಡು ಹುದ್ದೆ ತ್ಯಜಿಸಿ ಸ್ವಗ್ರಾಮಕ್ಕೆ ಬಂದರು. ತಂದೆಯ 6,500 ಉಡುಗೊರೆ ಹಣದಲ್ಲಿ ಸ್ಪರ್ಧಾತ್ಮಕ ಗ್ರಂಥಗಳನ್ನು ಕೊಂಡು ಅಧ್ಯಯನಕ್ಕಿಳಿದರು.

ಮೂರು ಬಾರಿ ಪ್ರಾಥಮಿಕ ಹಂತದಲ್ಲೇ ಹಿನ್ನಡೆ.ಚೆನ್ನೈನ ಉಚಿತ ತರಬೇತಿ ಕೇಂದ್ರ ಸೇರಿ ನಾಲ್ಕನೇ ಸಲ ಪೂರ್ವಭಾವಿ ದಾಟಿದರು. ಆಶ್ರಯವಿಲ್ಲದೆ ಸತ್ಯಂ ಚಿತ್ರಮಂದಿರದಲ್ಲಿ ಲೆಕ್ಕಿಗ,ಬಿಡುವಿನ ವೇಳೆಯಲ್ಲಿ ಉಪಾಹಾರ ಗೃಹದಲ್ಲಿ ಸಪ್ಲೈಯರ್ ಆದರು.ಭಾಷೆಯ ಕೊರತೆಯಿಂದ ಸಂದರ್ಶನದಲ್ಲಿ ಎಡವಿದರು.

ಆರನೇ ಬಾರಿಯೂ ಸ್ವಲ್ಪದರಲ್ಲೇ ಅವಕಾಶ ತಪ್ಪಿತು. ಅದೇ ಕಾಲಕ್ಕೆ ಗುಪ್ತಚರ ಇಲಾಖೆಯ ಹುದ್ದೆ ಒಲಿದುಬಂದರೂ,ನಾಗರಿಕ ಸೇವೆಯ ಗುರಿ ಬಿಡದೆ ನಿರಾಕರಿಸಿದರು. ಏಳನೇ,ಕೊನೆಯ ಅವಕಾಶ. 2008ರಲ್ಲಿ ರಾಷ್ಟ್ರಮಟ್ಟದಲ್ಲಿ 156ನೇ ಸ್ಥಾನ ಗಳಿಸಿ ಆಡಳಿತಾಧಿಕಾರಿಯಾದರು. ಲೆಕ್ಕಿಗನಿಂದ ರಾಷ್ಟ್ರಸೇವಕನವರೆಗಿನ ಈ ಪಯಣ ಸಾರುತ್ತದೆ: ಗುರಿಯಿದ್ದರೆ, ಅಡ್ಡಿಯೆಂಬುದು ಶಬ್ದ ಮಾತ್ರ.






ರೂಪ ಮಂಜುನಾಥ ಹೊಳೆನರಸೀಪುರ

ಅಧ್ಯಾಯ 6

ಕಳೆದ ಅಧ್ಯಾಯದಲ್ಲಿ ನಾವು ಸ್ಮಾರ್ಟ್ ವಾಚ್‌ಗಳು ಮತ್ತು AI ತಂತ್ರಜ್ಞಾನವು ಯೋಗದೊಂದಿಗೆ ಹೇಗೆ ಜುಗಲ್‌ಬಂದಿ ನಡೆಸುತ್ತಿವೆ ಎಂಬುದನ್ನು ನೋಡಿದ್ದೆವು. ಈಗ ಯೋಗದ ಜಗತ್ತಿನ ಅತ್ಯಂತ ದೊಡ್ಡ ಬೆಂಬಲದ ಕಡೆಗೆ ನಮ್ಮ ಗಮನ ಹರಿಸೋಣ. ದಶಕಗಳ ಕಾಲ ಯೋಗವನ್ನು ಕೇವಲ ಒಂದು ನಂಬಿಕೆ, ನಮ್ಯತೆ (flexibility) ಹೆಚ್ಚಿಸುವ ಕಸರತ್ತು ಅಥವಾ ಕೇವಲ ಭಾರತೀಯ ಸಂಪ್ರದಾಯ ಎಂದು ನೋಡುತ್ತಿದ್ದ ಜಾಗತಿಕ ವೈದ್ಯಕೀಯ ಲೋಕ ಇಂದು ತನ್ನ ನಿಲುವನ್ನು ಸಂಪೂರ್ಣವಾಗಿ ಬದಲಾಯಿಸಿಕೊಂಡಿದೆ.

ಇಂದು ಜಗತ್ತಿನ ಅತ್ಯಾಧುನಿಕ ಪ್ರಯೋಗಾಲಯಗಳಲ್ಲಿ ನರವಿಜ್ಞಾನಿಗಳು (Neuroscientists), ವರ್ತನಾತ್ಮಕ ಔಷಧ (Behavioral medicine) ತಜ್ಞರು ಮತ್ತು ಜೆನೆಟಿಕ್ಸ್ ಸಂಶೋಧಕರು ಯೋಗವನ್ನು ಮನುಷ್ಯನ ದೇಹ ಮತ್ತು ಮನಸ್ಸನ್ನು ಬದಲಾಯಿಸುವ ಒಂದು ಅಳೆಯಬಹುದಾದ ವಿಜ್ಞಾನವಾಗಿ ಒಪ್ಪಿಕೊಳ್ಳುತ್ತಿದ್ದಾರೆ. ಯೋಗ ಮಾಡುವಾಗ ನಮ್ಮ ಡಿಎನ್‌ಎ ಮತ್ತು ಮೆದುಳಿನೊಳಗೆ ಅಸಲಿಗೆ ಏನಾಗುತ್ತದೆ? ಬನ್ನಿ, ವೈಜ್ಞಾನಿಕವಾಗಿ ತಿಳಿಯೋಣ.

ನರವಿಜ್ಞಾನದ ಕಣ್ಣಲ್ಲಿ ಯೋಗ: ಮೆದುಳಿನ ಮರುರೂಪಿಸುವಿಕೆ (Neuroplasticity)

ನಾವು ಯೋಗಾಸನ ಮತ್ತು ಧ್ಯಾನವನ್ನು ನಿಯಮಿತವಾಗಿ ಮಾಡಿದಾಗ ನಮ್ಮ ಮೆದುಳಿನ ರಚನೆಯಲ್ಲೇ ಭೌತಿಕ ಬದಲಾವಣೆಗಳಾಗುತ್ತವೆ ಎಂಬುದನ್ನು ಒಖಖ ಸ್ಕ್ಯಾನ್‌ಗಳ ಮೂಲಕ ವಿಜ್ಞಾನಿಗಳು ಪತ್ತೆಹಚ್ಚಿದ್ದಾರೆ. ಇದನ್ನು ವಿಜ್ಞಾನದಲ್ಲಿ 'ನ್ಯೂರೋಪ್ಲಾಸ್ಟಿಸಿಟಿ' ಎನ್ನಲಾಗುತ್ತದೆ.

ಅಮಿಗ್ಡಾಲಾದ ಸಂಕೋಚನ (Amydala): ನಮ್ಮ ಮೆದುಳಿನಲ್ಲಿರುವ 'ಅಮಿಗ್ಡಾಲಾ' ಎಂಬ ಭಾಗವೇ ಭಯ, ಆತಂಕ ಮತ್ತು ಒತ್ತಡವನ್ನು ನಿಯಂತ್ರಿಸುವ ಕೇಂದ್ರ. ನಿರಂತರ ಯೋಗಾಭ್ಯಾಸದಿಂದ ಈ ಅಮಿಗ್ಡಾಲಾದ ಗಾತ್ರ ಮತ್ತು ಅದರ ಚಟುವಟಿಕೆ ಕಡಿಮೆಯಾಗುತ್ತದೆ. ಅಂದರೆ, ಪರಿಸ್ಥಿತಿಗಳು ಎಷ್ಟೇ ಕಠಿಣವಾಗಿದ್ದರೂ ಯೋಗ ಮಾಡುವವರು ಶಾಂತವಾಗಿರಲು ಇದುವೇ ಮುಖ್ಯ ಕಾರಣ!

ಪ್ರಿಫ್ರಂಟಲ್ ಕಾರ್ಟೆಕ್ಸ್‌ನ ವಿಕಾಸ (Prefrontal Cortex): ನಿರ್ಧಾರ ಕೈಗೊಳ್ಳುವುದು, ಏಕಾಗ್ರತೆ ಮತ್ತು ಭಾವನಾತ್ಮಕ ಸಮತೋಲನಕ್ಕೆ ಕಾರಣವಾಗುವ ಮೆದುಳಿನ ಮುಂಭಾಗದ ವಿಸ್ತೀರ್ಣವು ಯೋಗದಿಂದ ಬಲಗೊಳ್ಳುತ್ತದೆ.

ಎಪಿಜೆನೆಟಿಕ್ಸ್ (Epigenetics): ನಿಮ್ಮ ಡಿಎನ್‌ಎ ಮೇಲಾಗುವ ಪ್ರಭಾವ!

ಯೋಗದ ಪ್ರಭಾವ ಕೇವಲ ಸ್ನಾಯುಗಳಿಗಷ್ಟೇ ಸೀಮಿತವಾಗಿಲ್ಲ, ಅದು ನಮ್ಮ ಜೀವಕೋಶಗಳ ಆಳದವರೆಗೂ ತಲುಪುತ್ತದೆ. ಇತ್ತೀಚಿನ 'ಎಪಿಜೆನೆಟಿಕ್ಸ್' ಸಂಶೋಧನೆಗಳ ಪ್ರಕಾರ, ನಾವು ಹುಟ್ಟಿನಿಂದ ಪಡೆದ ಡಿಎನ್‌ಎ ಬದಲಾಗದಿದ್ದರೂ, ಯಾವ ಜೀನ್‌ಗಳು ಕೆಲಸ ಮಾಡಬೇಕು ಮತ್ತು ಯಾವುವು ಸುಪ್ತವಾಗಿರಬೇಕು ಎಂಬುದನ್ನು ನಮ್ಮ ಜೀವನಶೈಲಿ ನಿರ್ಧರಿಸುತ್ತದೆ.

ಉರಿಯೂತ ನಿವಾರಣೆ (Anti-inflammatory effect): ದೀರ್ಘಕಾಲದ ಒತ್ತಡದಿಂದಾಗಿ ನಮ್ಮ ದೇಹದಲ್ಲಿ ಉರಿಯೂತ (inflammation) ಉಂಟಾಗುತ್ತದೆ, ಇದು ಹೃದಯ ಕಾಯಿಲೆ, ಮಧುಮೇಹ ಮತ್ತು ಕ್ಯಾನ್ಸರ್‌ನಂತಹ ಕಾಯಿಲೆಗಳಿಗೆ ದಾರಿಯಾಗುತ್ತದೆ. ಆದರೆ, ಯೋಗ ಮತ್ತು ಪ್ರಾಣಾಯಾಮಗಳು ಈ ಉರಿಯೂತವನ್ನು ಉಂಟುಮಾಡುವ ಜೀನ್‌ಗಳ (Pro-inflammatory genes) ಚಟುವಟಿಕೆಯನ್ನು ಸದ್ದಿಲ್ಲದೆ ನಿಲ್ಲಿಸುತ್ತವೆ (Downregulate ಮಾಡುತ್ತವೆ) ಎಂದು ಪ್ರಯೋಗಾಲಯಗಳು ಸಾಬೀತುಪಡಿಸಿವೆ!

ಹೃದಯ ಮತ್ತು ಹಾರ್ಮೋನ್‌ಗಳ ಜುಗಲ್‌ಬಂದಿ ಪತಂಜಲಿ ಮಹರ್ಷಿಗಳು ಯೋಗಸೂತ್ರಗಳಲ್ಲಿ ಮನಸ್ಸಿನ ನಿಯಂತ್ರಣ ಎಂದು ವಿವರಿಸಿದ್ದನ್ನು, ಇಂದಿನ ವಿಜ್ಞಾನಿಗಳು ಹೃದಯ ಬಡಿತದ ವ್ಯತ್ಯಾಸದ ಚಾರ್ಟ್‌ಗಳು (Heart-Rate Variability charts) ಮತ್ತು ಒತ್ತಡದ ಹಾರ್ಮೋನ್ ಪ್ಯಾನೆಲ್‌ಗಳ ಮೇಲೆ ಅಕ್ಷರಶಃ ನಕ್ಷೆ ಮಾಡುತ್ತಿದ್ದಾರೆ.

ಕಾರ್ಟಿಸೋಲ್ ಮಟ್ಟ ಇಳಿಕೆ: ಯೋಗಾಭ್ಯಾಸದ ತಕ್ಷಣವೇ ದೇಹದಲ್ಲಿ ಒತ್ತಡದ ಹಾರ್ಮೋನ್ ಆದ ಕಾರ್ಟಿಸೋಲ್ (Cortisol) ಮಟ್ಟ ಗಣನೀಯವಾಗಿ ಇಳಿಯುತ್ತದೆ ಮತ್ತು ಆನಂದವನ್ನು ಕೊಡುವ ಎಂಡಾರ್ಫಿನ್ ಹಾಗೂ ಗಬಾ (ಉಂಃಂ) ಎಂಬ ರಾಸಾಯನಿಕಗಳು ಮೆದುಳಿನಲ್ಲಿ ಬಿಡುಗಡೆಯಾಗುತ್ತವೆ. ಇದು ಖಿನ್ನತೆ ಮತ್ತು ಆತಂಕಕ್ಕೆ ನೈಸರ್ಗಿಕ ಮದ್ದಾಗಿದೆ.

ವಿಜ್ಞಾನದ ದೃಷ್ಟಿಯಲ್ಲಿ ಯೋಗದ 3 ಮುಖ್ಯ ಲಾಭಗಳೆಂದರೆ,

ಬೆನ್ನುಮೂಳೆಯ ಆರೋಗ್ಯ: ಯೋಗದ ವಿವಿಧ ಭಂಗಿಗಳು ಬೆನ್ನುಮೂಳೆಯ ದ್ರವದ (Synovial fluid) ಪರಿಚಲನೆಯನ್ನು ಉತ್ತಮಗೊಳಿಸಿ, ನರಗಳು ದೀರ್ಘಕಾಲ ಯೌವನಯುತವಾಗಿರುವಂತೆ ನೋಡಿಕೊಳ್ಳುತ್ತವೆ.

ರೋಗನಿರೋಧಕ ಶಕ್ತಿ ಹೆಚ್ಚಳ: ಒತ್ತಡ ಕಡಿಮೆ ಇರುವ ದೇಹದಲ್ಲಿ ರೋಗನಿರೋಧಕ ಜೀವಕೋಶಗಳು (ಘಃಅ) ಹೆಚ್ಚು ಸಕ್ರಿಯವಾಗಿ ಕೆಲಸ ಮಾಡುತ್ತವೆ.

ವಯಸ್ಸಾಗುವ ಪ್ರಕ್ರಿಯೆ ನಿಧಾನ: ಯೋಗವು ಕ್ರೋಮೋಸೋಮ್‌ಗಳ ತುದಿಯಲ್ಲಿರುವ 'ಟೆಲೋಮಿಯರ್ಸ್' (Telomeres) ಎಂಬ ಭಾಗವನ್ನು ರಕ್ಷಿಸುತ್ತದೆ, ಇದು ಮನುಷ್ಯನಿಗೆ ಬೇಗನೆ ವಯಸ್ಸಾಗದಂತೆ ತಡೆಯುತ್ತದೆ!

ಆಧುನಿಕ ವೈದ್ಯಕೀಯ ವಿಜ್ಞಾನ ಮತ್ತು ನ್ಯೂರೋಸೈನ್ಸ್ (Neuroscience) ಸಂಶೋಧನೆಗಳ ಪ್ರಕಾರ, ಯೋಗದಿಂದ ಸಿಗುವ ಇನ್ನು ಕೆಲವು ಪ್ರಮುಖ ಲಾಭಗಳು ಇಲ್ಲಿವೆ:

ನ್ಯೂರೋಪ್ಲಾಸ್ಟಿಸಿಟಿ ಮತ್ತು ಮೆದುಳಿನ ವಿಕಾಸ (Neuroplasticity) ವಿಜ್ಞಾನದ ಪ್ರಕಾರ, ನಿಯಮಿತ ಯೋಗ ಮತ್ತು ಧ್ಯಾನದ ಅಭ್ಯಾಸವು ಮೆದುಳಿನ ರಚನೆಯನ್ನೇ ಧನಾತ್ಮಕವಾಗಿ ಬದಲಾಯಿಸುತ್ತದೆ

.ಬೂದು ದ್ರವ್ಯದ ಹೆಚ್ಚಳ (Grey Matter): ಯೋಗವು ಮೆದುಳಿನ ಹಿಪೊಕಾಂಪಸ್ (ನೆನಪಿನ ಶಕ್ತಿಗೆ ಸಂಬಂಧಿಸಿದ್ದು) ಮತ್ತು ಪ್ರಿಫ್ರಂಟಲ್ ಕಾರ್ಟೆಕ್ಸ್ (ನಿರ್ಧಾರ ಕೈಗೊಳ್ಳುವಿಕೆ ಮತ್ತು ಭಾವನಾತ್ಮಕ ನಿಯಂತ್ರಣಕ್ಕೆ ಸಂಬಂಧಿಸಿದ್ದು) ಭಾಗಗಳಲ್ಲಿನ ಬೂದು ದ್ರವ್ಯದ ಸಾಂದ್ರತೆಯನ್ನು ಹೆಚ್ಚಿಸುತ್ತದೆ.

ಅಮಿಗ್ಡಾಲ ಕುಗ್ಗುವಿಕೆ (Amygdala): ಮೆದುಳಿನಲ್ಲಿ ಭಯ ಮತ್ತು ಒತ್ತಡವನ್ನು ಸೃಷ್ಟಿಸುವ 'ಅಮಿಗ್ಡಾಲ' ಎಂಬ ಭಾಗದ ಗಾತ್ರವನ್ನು ಯೋಗವು ಕುಗ್ಗಿಸುತ್ತದೆ. ಇದರಿಂದಾಗಿ ವ್ಯಕ್ತಿಯಲ್ಲಿ ಆತಂಕ ಮತ್ತು ಕೋಪ ಕಡಿಮೆಯಾಗುತ್ತದೆ.

ದೀರ್ಘಕಾಲದ ಉರಿಯೂತ ನಿವಾರಣೆ (Reduction of Chronic Inflammation): ದೇಹದಲ್ಲಿ ದೀರ್ಘಕಾಲದ ಉರಿಯೂತ (Chronic Inflammation) ಇದ್ದರೆ ಅದು ಹೃದಯ ಕಾಯಿಲೆ, ಕ್ಯಾನ್ಸರ್ ಮತ್ತು ಮಧುಮೇಹಕ್ಕೆ (ಊಚಿಛಜಣಜಾ) ಕಾರಣವಾಗುತ್ತದೆ.ಯೋಗವು ದೇಹದಲ್ಲಿ ಉರಿಯೂತವನ್ನು ಉಂಟುಮಾಡುವ 'ಸೈಟೊಕಿನ್ಸ್' (Cytokines - ವಿಶೇಷವಾಗಿ IL-6) ಎಂಬ ಪ್ರೊಟೀನ್‌ಗಳ ಮಟ್ಟವನ್ನು ಗಣನೀಯವಾಗಿ ಕಡಿಮೆ ಮಾಡುತ್ತದೆ ಎಂದು ಕ್ಲಿನಿಕಲ್ ಪ್ರಯೋಗಗಳು ಸಾಬೀತುಪಡಿಸಿವೆ. ಇದು ದೇಹದ ಒಳಗಿನ ಅಂಗಾಂಗಗಳನ್ನು ಆರೋಗ್ಯವಾಗಿಡುತ್ತದೆ.

ಜೀನ್‌ಗಳ ಅಭಿವ್ಯಕ್ತಿಯಲ್ಲಿ ಬದಲಾವಣೆ (Epigenetics / Gene Expression): ನಮ್ಮ ಪೂರ್ವಜರಿಂದ ಬಂದ ಜೀನ್‌ಗಳನ್ನು ಬದಲಾಯಿಸಲು ಸಾಧ್ಯವಿಲ್ಲ ಎಂಬ ನಂಬಿಕೆ ಇತ್ತು. ಆದರೆ ಇತ್ತೀಚಿನ 'ಎಪಿಜೆನೆಟಿಕ್ಸ್' ವಿಜ್ಞಾನವು ಯೋಗದ ಮೂಲಕ ನಾವು ನಮ್ಮ ಜೀನ್‌ಗಳು ಕೆಲಸ ಮಾಡುವ ವಿಧಾನವನ್ನು ಬದಲಾಯಿಸಬಹುದು ಎಂದು ತೋರಿಸಿಕೊಟ್ಟಿದೆ.ಯೋಗ ಮತ್ತು ಪ್ರಾಣಾಯಾಮಗಳು ಕೇವಲ ಕೆಲವು ವಾರಗಳ ಅಭ್ಯಾಸದಲ್ಲೇ, ಕಾಯಿಲೆಗಳನ್ನು ತಂದೊಡ್ಡುವ ಜೀನ್‌ಗಳನ್ನು 'ಆಫ್' (Down-regulate) ಮಾಡಿ, ರೋಗನಿರೋಧಕ ಮತ್ತು ಆರೋಗ್ಯ ವೃದ್ಧಿಸುವ ಜೀನ್‌ಗಳನ್ನು 'ಆನ್' (Up-regulate) ಮಾಡುತ್ತವೆ.

ವ್ಯಾಗಲ್ ಟೋನ್ ಮತ್ತು ಹೃದಯದ ಸಾಮರ್ಥ್ಯ ವೃದ್ಧಿ (Vagal Tone & Vagus Nerve): ನೀವು ಮೊದಲೇ ಚರ್ಚಿಸಿದಂತೆ, ಯೋಗದ ಪ್ರಾಣಾಯಾಮ ಮತ್ತು ಆಸನಗಳು ದೇಹದ ಅತ್ಯಂತ ಉದ್ದವಾದ 'ವ್ಯಾಗಸ್ ನರ'ವನ್ನು (Vagus Nerve) ಉತ್ತೇಜಿಸುತ್ತವೆ.ಇದರಿಂದಾಗಿ 'ವ್ಯಾಗಲ್ ಟೋನ್' ಉತ್ತಮಗೊಳ್ಳುತ್ತದೆ. ವಿಜ್ಞಾನದ ದೃಷ್ಟಿಯಲ್ಲಿ ಯಾರ ವ್ಯಾಗಲ್ ಟೋನ್ ಹೆಚ್ಚಿರುತ್ತದೆಯೋ, ಅವರ ದೇಹವು ಒತ್ತಡದ ಪರಿಸ್ಥಿತಿಯಿಂದ ತಕ್ಷಣವೇ ಮರಳಿ ಸಹಜ ಸ್ಥಿತಿಗೆ (Homeostasis) ಬರಬಲ್ಲದು. ಇದು ರಕ್ತದೊತ್ತಡವನ್ನು ನಿಯಂತ್ರಣದಲ್ಲಿಡುತ್ತದೆ.

ರಕ್ತನಾಳಗಳ ನಮ್ಯತೆ (Vascular Health): ಯೋಗವು ಕೇವಲ ಸ್ನಾಯುಗಳನ್ನು ಮಾತ್ರವಲ್ಲ, ನಮ್ಮ ರಕ್ತನಾಳಗಳನ್ನೂ (Blood vessels) ಹೆಚ್ಚು ಸ್ಥಿತಿಸ್ಥಾಪಕತ್ವವುಳ್ಳದ್ದನ್ನಾಗಿ (Flexible) ಮಾಡುತ್ತದೆ. ಇದರಿಂದಾಗಿ ರಕ್ತನಾಳಗಳ ಒಳಗಿನ ಗೋಡೆಗಳಲ್ಲಿ ಕೊಬ್ಬು ಶೇಖರಣೆಯಾಗುವುದು ತಪ್ಪುತ್ತದೆ ಮತ್ತು ಇಡೀ ದೇಹಕ್ಕೆ ಆಮ್ಲಜನಕಯುಕ್ತ ರಕ್ತದ ಪರಿಚಲನೆ ಸರಾಗವಾಗಿ ನಡೆಯುತ್ತದೆ.

ವಿಜ್ಞಾನದ ತೀರ್ಪಿನ ಪ್ರಕಾರ, ಯೋಗವು ಕೇವಲ ಒಂದು ದೈಹಿಕ ಕಸರತ್ತಲ್ಲ; ಅದು ನಮ್ಮ ನರಮಂಡಲ (Nervous System), ರೋಗನಿರೋಧಕ ಮಂಡಲ (Immune System) ಮತ್ತು ಹಾರ್ಮೋನ್ ವ್ಯವಸ್ಥೆಯನ್ನು (Endocrine System) ಮರುಜೋಡಣೆ ಮಾಡುವ ಒಂದು ಜೀವಕೋಶ ಆಧಾರಿತ ವಿಜ್ಞಾನ (Cellular Science)!

ಇದು ಒಂದು ಅರ್ಥದಲ್ಲಿ, ತವರಿಗೆ ಮರಳಿದಂತೆ. ನಮ್ಮ ಭಾರತೀಯ ಸಾಂಪ್ರದಾಯಿಕ ಯೋಗ ಗುರುಗಳು ಏನನ್ನು ಅನುಭವದ ಮೂಲಕ ಮತ್ತು ಧರ್ಮಗ್ರಂಥಗಳ ಮೂಲಕ ಕಂಡುಕೊಂಡಿದ್ದರೋ, ಇಂದು ಪ್ರಪಂಚದ ಉಳಿದ ಭಾಗಗಳು ಆಧುನಿಕ ಪ್ರಯೋಗಾಲಯಗಳ ಮೂಲಕ ಅದೇ ತೀರ್ಮಾನಕ್ಕೆ ಬರುತ್ತಿವೆ. ವಿಜ್ಞಾನ ಮತ್ತು ಆಧ್ಯಾತ್ಮದ ಈ ಸಂಗಮವೇ ಯೋಗಕ್ಕೆ ಇಂದು ಜಾಗತಿಕ ಮಟ್ಟದಲ್ಲಿ ಅತ್ಯುನ್ನತ ಗೌರವವನ್ನು ತಂದುಕೊಟ್ಟಿದೆ.

ವಿಜ್ಞಾನದ ಈ ಹೊಸ ಸಂಶೋಧನೆಗಳನ್ನು ಕೇಳಿದ ಮೇಲೆ ನಿಮಗೆ ಯೋಗದ ಮೇಲಿರುವ ಗೌರವ ಇನ್ನೂ ಹೆಚ್ಚಾಯಿತೇ? ಖಂಡಿತವಾಗಿಯೂ ಆಗಿರಲೇ ಬೇಕು.

ನಾವು ನಮ್ಮ ಈ ಸರಣಿಯ ಏಳನೆಯ ಹಾಗೂ ಅತ್ಯಂತ ಪ್ರಮುಖವಾದ ಭಾಗಕ್ಕೆ ತಲುಪಲಿದ್ದೇವೆ: "ಯೋಗದ ಜಾಗತಿಕ ಭವಿಷ್ಯ: ಹೆಮ್ಮೆ, ಜವಾಬ್ದಾರಿ ಮತ್ತು ಮೂಲ ತತ್ವದ ರಕ್ಷಣೆ!" ಯೋಗವು ಜಾಗತಿಕವಾಗಿ ಬೆಳೆದು ಒಂದು ದೊಡ್ಡ ಉದ್ಯಮವಾಗುತ್ತಿರುವ ಈ ಕಾಲದಲ್ಲಿ, ಅದರ ಮೂಲ ಆಧ್ಯಾತ್ಮಿಕ ಆಳವನ್ನು ಕಳೆದುಕೊಳ್ಳದಂತೆ ರಕ್ಷಿಸುವ ಜವಾಬ್ದಾರಿ ನಮ್ಮ ಹೆಗಲ ಮೇಲೆ ಹೇಗಿದೆ? ತಿಳಿಯಲು ತಪ್ಪದೇ ಮುಂದಿನ ಅಂತಿಮ ಲೇಖನ ಓದಿ!

ವಂದನೆಗಳು.

